# ಹಂಪಿ ಟೈಮ್ಸ್
## HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY








ಸಂಪುಟ:01 • ಸಂಚಿಕೆ:292 • ನೋಂದಣಿ ನಂ.:KARKAN27911 • ವಿಜಯನಗರ • 19.04.2024 • ಶುಕ್ರವಾರ • ಪುಟ:04 • ಬೆಲೆ:2
Volume:01 • Issue:292 • Reg.No:KARKAN27911 • VIJAYANAGARA • 19.04.2024 • Friday • Page:04 • Rs:2


## ನಿಮ್ಮ ಮತ ಲೋಕಕ್ಕೆಲ್ಲಾ ಹಿತವಾಗಿರಲಿ

# ಹಂಪಿ ಬ್ರಹ್ಮರಥೋತ್ಸವ, ಪಂಪಾ ಕಲ್ಯಾಣೋತ್ಸವ

## ಏ.21 ಶ್ರೀ ಪಂಪಾವಿರೂಪಾಕ್ಷೇಶ್ವರ ಕಲ್ಯಾಣೋತ್ಸವ | ಏ.23 ಬ್ರಹ್ಮರಥೋತ್ಸವ | ಏ.25 ತೆಪ್ಪೋತ್ಸವ

**ಹಂಪಿ ಟೈಮ್ಸ್ ಹೊಸಪೇಟೆ**

ಶ್ರೀ ಪಂಪಾ ವಿರೂಪಾಕ್ಷೇಶ್ವರಸ್ವಾಮಿ ಮತ್ತು ಹಂಪಿ ಶ್ರೀ ವಿರೂಪಾಕ್ಷ ವಿದ್ಯಾರಣ್ಯ ಪೀಠಾಧೀಶ್ವರರ ಸಹಿತ ಶ್ರೀ ಚಂದ್ರಮೌಳೇಶ್ವರ ಸ್ವಾಮಿಯ ಬ್ರಹ್ಮರಥೋತ್ಸವ ನಿಮಿತ್ತು ಏ.23 ರಂದು ಬೆಳಿಗ್ಗೆ 10.25ಕ್ಕೆ ಬ್ರಹ್ಮರಥೋತ್ಸವ ಮಡಿತೇರು, ಸಂಜೆ.4.30ಕ್ಕೆ ಧ್ವಜ ಮುಕ್ತಿಬಾವುಟ ಹರಾಜು ನಂತರ 4.45ಕ್ಕೆ ಬ್ರಹ್ಮರಥೋತ್ಸವ ಶ್ರೀ ಜಗದ್ಗುರು ಶಂಕರಾಚಾರ್ಯ ಶ್ರೀ ಹಂಪಿ ವಿರೂಪಾಕ್ಷ ವಿದ್ಯಾರಣ್ಯ ಮಹಾಪೀಠಾಧೀಶ್ವರರಾದ ಶ್ರೀ ವಿದ್ಯಾರಣ್ಯ ಭಾರತಿ ಸ್ವಾಮಿಗಳವರ ಆಜ್ಞಾನುಸಾರ ನೆರವೇರಲಿದೆ ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ತಿಳಿಸಿದ್ದಾರೆ.

ಬ್ರಹ್ಮ ರಥೋತ್ಸವ ನಿಮಿತ್ತ ಶ್ರೀ ಚಕ್ರತೀರ್ಥ ಕೋದಂಡ ರಾಮಸ್ವಾಮಿಯವರ ಸನ್ನಿಧಿಯಲ್ಲಿ ಶ್ರೀವಾಲ್ಮೀಕಿ ವಿರಚಿತ ಶ್ರೀ ಮದ್ರಾಮಾಯಣ ಪಾರಾಯಣ ಪ್ರಾರಂಭ ಹಾಗೂ ಜಪ ಪಾರಾಯಣಾದಿಗಳು ಸೇರಿದಂತೆ ವಿವಿಧ ಕಾರ್ಯಕ್ರಮಗಳು ಜರುಗಲಿವೆ.



ಏ.18 ರಂದು ಗುರುವಾರ ಬೆಳಿಗ್ಗೆ ಸಿಂಹವಾಹನೋತ್ಸವ, ರಾತ್ರಿ ಚಂದ್ರಮಂಡಲ ವಾಹನೋತ್ಸವ, ಏ.19 ಶುಕ್ರವಾರ ಬೆಳಿಗ್ಗೆ ಸೂರ್ಯ ಪ್ರಭವಾಹನೋತ್ಸವ, ರಾತ್ರಿ ಶೇಷವಾಹನೋತ್ಸವ, ಏ.20 ಶನಿವಾರ ಬೆಳಿಗ್ಗೆ ಶೇಷವಾಹನೋತ್ಸವ, ರಾತ್ರಿ ಪುಷ್ಪಮಂಟಪವಾಹನೋತ್ಸವ, ಏ.21 ರಂದು ಭಾನುವಾರ ಬೆಳಿಗ್ಗೆ 9.30ಕ್ಕೆ ಪುಷ್ಪ ಮಂಟಪವಾಹನೋತ್ಸವ ಹಾಗೂ ಶ್ರೀ ವಿರೂಪಾಕ್ಷ ವಿದ್ಯಾರಣ್ಯ ಪೀಠದ ಪ್ರಪ್ರಥಮ ಪೀಠಾಧೀಶ್ವರರಾಗಿದ್ದ ಶ್ರೀವಿದ್ಯಾರಣ್ಯಸ್ವಾಮಿಯಗಳ ಜಯಂತಿ ಆಚರಣೆ ನಡೆಯಲಿದೆ. ಏ.21 ರಾತ್ರಿ 9.30ಕ್ಕೆ ಶ್ರೀ ಪಂಪಾ ವಿರೂಪಾಕ್ಷೇಶ್ವರ ಸ್ವಾಮಿಯವರ ಕಲ್ಯಾಣೋತ್ಸವ ಹಾಗೂ ರಜತ ನಂದಿ ವಾಹನೋತ್ಸವ ನಡೆಯಲಿದೆ. ಏ.22 ರಂದು ಸೋಮವಾರ ಬೆಳಿಗ್ಗೆ ಗಜವಾಹನೋತ್ಸವ, ರಾತ್ರಿ ಗಜವಾಹನೋತ್ಸವ ಜರುಗಲಿವೆ.



ಏ.24 ರಂದು ಬುಧವಾರ ರಾತ್ರಿ ರಜತ ಅಶ್ವವಾಹನೋತ್ಸವ ಮೃಗಯಾತ್ರೆ(ಕಿರಾತಾಲಂಕಾರ) ಕಡಬಿನ ಕಾಳಗ, ಏ.25 ಗುರುವಾರ ಬೆಳಿಗ್ಗೆ ಪೂರ್ಣಾಹುತಿ ವಸಂತೋತ್ಸವ., ಅಂದು ಬೆಳಿಗ್ಗೆ 10.30ಕ್ಕೆ ಶ್ರೀ ಚಕ್ರತೀರ್ಥ ಕೋದಂಡರಾಮಸ್ವಾಮಿ ಕಲ್ಯಾಣೋತ್ಸವ ಹಾಗೂ ರಥೋತ್ಸವ. ಏ.25 ಗುರುವಾರ ರಾತ್ರಿ 8ಕ್ಕೆ ಮನ್ಮುಖತೀರ್ಥದಲ್ಲಿ ಶ್ರೀ ಪಂಪಾ ವಿರೂಪಾಕ್ಷೇಶ್ವರಸ್ವಾಮಿಯ ತೆಪ್ಪೋತ್ಸವ ಜರುಗಲಿವೆ ಎಂದು ತಿಳಿಸಿದ್ದಾರೆ.

ಏ.23 ರಂದು ಶ್ರೀ ವಿದ್ಯಾರಣ್ಯ ಮಠದಲ್ಲಿ ದಾಸೋಹ ಇರುತ್ತದೆ ಎಂದು ಹಿಂದು ಧಾರ್ಮಿಕ ದತ್ತಿ ಇಲಾಖೆಯ ಶ್ರೀ ವಿರೂಪಾಕ್ಷೇಶ್ವರಸ್ವಾಮಿಯ ದೇವಸ್ಥಾನದ ಸಹಾಯಕ ಆಯುಕ್ತ ಗಂಗಾಧರಪ್ಪ ಮತ್ತು ಇಓ ಹನುಮಂತಪ್ಪ ತಿಳಿಸಿದ್ದಾರೆ.

# ಅಚ್ಚರಿ ತಂದ ಆರತಿತಟ್ಟೆ ಹಣ!

## ಮೂರು ತಿಂಗಳಲ್ಲಿ 10.93 ಲಕ್ಷ ರೂ. ಸಂಗ್ರಹ



**ಹಂಪಿ ಟೈಮ್ಸ್ ಹೊಸಪೇಟೆ:**

ಹಂಪಿ ಶ್ರೀ ವಿರೂಪಾಕ್ಷೇಶ್ವರಸ್ವಾಮಿ ದೇವಸ್ಥಾನದ ಗರ್ಭಗುಡಿ ಪ್ರವೇಶ ದ್ವಾರದಲ್ಲಿ ಮಂಗಳಾರತಿ ತಟ್ಟೆಗೆ ಭಕ್ತರು ಹಾಕುತ್ತಿದ್ದ ಹಣವು ದೇವಸ್ಥಾನದ ಅಭಿವೃದ್ಧಿಗಾಗಿ ಬಳಕೆಯಾಗುತ್ತದೆಂದು, ಹೊಸ ಹುಂಡಿಯನ್ನಿಟ್ಟು, ಆರತಿ ತಟ್ಟೆಯ ಬದಲಿಗೆ ನೇರವಾಗಿ ಹುಂಡಿಗೆ ಹಾಕುವಂತೆ ಸೂಚಿಸಿ, ಧಾರ್ಮಿಕ ದತ್ತಿ ಇಲಾಖಾಧಿಕಾರಿಗಳು ಕಾರ್ಯ ಪರಿಪಾಲನೆಗೆ ಮುಂದಾಗಿದ್ದರು. ಪರಿಣಾಮ ಕಳೆದ ಮೂರು ತಿಂಗಳಲ್ಲಿ ಮಂಗಳಾರತಿ ತಟ್ಟೆಗೆ ಹೋಗುತ್ತಿದ್ದ ಹಣವೆಷ್ಟು ಎಂಬುದು ಇದೀಗ ಬಯಲಾಗಿದೆ.

ಹಿಂದೂ ದಾರ್ಮಿಕ ದತ್ತಿ ಉಂಬಳಿಗಳ ಇಲಾಖೆ ಗರ್ಭಗುಡಿ ಪ್ರವೇಶದ್ವಾರದಲ್ಲಿ ಜ.13, 2024 ರಂದು ಹೊಸ ಹುಂಡಿಯನ್ನು ಇಟ್ಟು, ಸಿಬ್ಬಂದಿ ನಿಯೋಜಿಸಿ, ಮಂಗಳಾರತಿ ತಟ್ಟೆಯ ಹಣವನ್ನು ನೇರವಾಗಿ ಹುಂಡಿಗೆ ಹಾಕಿಸುತ್ತಿದ್ದರು. ಏ.18 ರವರೆಗೆ ಒಟ್ಟು 96 ದಿನಗಳಲ್ಲಿ ಒಂದು ಹುಂಡಿಯಲ್ಲಿ ಸಂಗ್ರಹವಾಗಿರುವ ಹಣವನ್ನು ಅಧಿಕಾರಿಗಳು ಭದ್ರತಾ ಸಿಬ್ಬಂದಿ ಸಮ್ಮುಖದಲ್ಲಿ ಗುರುವಾರ ಎಣಿಕೆ ಮಾಡಲಾಗಿದ್ದು, ಒಟ್ಟು 10,93,029 ರೂ ಸಂಗ್ರಹವಾಗಿದೆ ಎಂಬುದನ್ನು ಹಣ ಎಣಿಕೆಯ ನಂತರ ಅಧಿಕಾರಿ ಹಾಗೂ ಭಕ್ತರ ವಲಯದಲ್ಲಿ ಅಚ್ಚರಿ ಮೂಡಿಸಿದೆ.

ಆರತಿ ತಟ್ಟೆಯ ಹಣ ಜೀವನಕ್ಕೆ ಆಧಾರವಾಗಿದೆಯೆಂದು ಹೊಸ ಹುಂಡಿ ಪೆಟ್ಟಿಗೆ ಅಳವಡಿಸಿದ್ದಕ್ಕೆ ಅರ್ಚಕರಿಂದ ಆರಂಭದಲ್ಲಿ ಮೌನವಿರೋಧವೂ ವ್ಯಕ್ತವಾಗಿತ್ತು.



ಶ್ರೀ ವಿರೂಪಾಕ್ಷೇಶ್ವರ ದೇವಸ್ಥಾನದ ಹೊಸ ಹುಂಡಿಯೊಂದರಲ್ಲಿ ಕಳೆದ ಮೂರು ತಿಂಗಳಲ್ಲಿ 10.93 ಲಕ್ಷ ರೂ.ಗಳನ್ನು ಭಕ್ತರು ಹಾಕಿದ್ದಾರೆ. ಭಕ್ತರ ಹಾಕಿದ ಹುಂಡಿ ಹಣವನ್ನು ಶ್ರೀ ಹಂಪಿ ವಿರೂಪಾಕ್ಷೇಶ್ವರ ದೇವಸ್ಥಾನದ ಅಭಿವೃದ್ಧಿ ಮತ್ತು ಭಕ್ತರಿಗೆ ಕುಡಿಯುವ ನೀರು ಸೇರಿದಂತೆ ಮೂಲಭೂತ ಸೌಲಭ್ಯ ಕಲ್ಪಿಸಲು ಬಳಕೆ ಮಾಡಲಾಗುವುದು.

– ಎಂ.ಎಸ್.ದಿವಾಕರ, ಜಿಲ್ಲಾಧಿಕಾರಿ, ವಿಜಯನಗರ


**ಸುದ್ದಿ, ಜಾಹೀರಾತು ಕಚೇರಿ**

ವಿಜಯನಗರ ಜಿಲ್ಲೆಯ ಸಾರ್ವಜನಿಕ ಸುದ್ದಿ ಪ್ರಕಟಣೆಗಳ ಮಾಹಿತಿ ಪ್ರತಿಗಳನ್ನು ನೇರವಾಗಿ ಈ ಕೆಳಗಿನ ಕಚೇರಿ ವಿಳಾಸಕ್ಕೆ ತಲುಪಿಸಲು ಕೋರಿದೆ.

**ಹಂಪಿ ಟೈಮ್ಸ್**

ಬಂಬೂ ಬಜಾರ್, ವಾಲ್ಮೀಕಿ ಸರ್ಕಲ್ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.
ಮೊ: 94486 33038
Email: hampitimes@gmail.com








## ಸಮೀಕ್ಷೆ ಪ್ರಸಾರಕ್ಕೆ ಬ್ರೇಕ್: ಚುನಾವಣಾ ಆಯೋಗ ಸೂಚನೆ

**ಹಂಪಿ ಟೈಮ್ಸ್ ಹೊಸಪೇಟೆ**

ಸಾರ್ವತ್ರಿಕ ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಭಾರತ ಚುನಾವಣಾ ಆಯೋಗವು ಪ್ರಜಾಪ್ರಾತಿನಿಧ್ಯ ಕಾಯ್ದೆ 1951 ರ ಕಲಂ 126ಎ(1) ರಂತೆ ಏಪ್ರಿಲ್ 19 ರ ಬೆಳಿಗ್ಗೆ 07 ಗಂಟೆಯಿಂದ ಜೂನ್ 01 ರ ಸಂಜೆ 06.30 ಗಂಟೆಯವರೆಗೆ ಯಾವುದೇ ಮಾಧ್ಯಮಗಳು ಮತದಾನಕ್ಕೆ ಸಂಬಂಧಪಟ್ಟ ಅಭಿಪ್ರಾಯದ ಸಮೀಕ್ಷೆಗಳು ಸೇರಿದಂತೆ ಚುನಾವಣೆಗೆ ಸಂಬಂಧಪಟ್ಟ ಯಾವುದೇ ಸಮೀಕ್ಷೆಯ ಫಲಿತಾಂಶವನ್ನು ಪ್ರಸಾರ ಮಾಡುವುದನ್ನು ನಿರ್ಬಂಧಿಸಿ ಆದೇಶಿಸಿದೆ ಎಂದು ಉಪ ಮುಖ್ಯ ಚುನಾವಣಾಧಿಕಾರಿ ನವೀನ್ ಜೋಸೆಫ್ ಎ ಅವರು ತಿಳಿಸಿದ್ದಾರೆ.

ಭಾರತ ಚುನಾವಣಾ ಆಯೋಗದ ಈ ಆದೇಶವನ್ನು ರಾಜ್ಯದ ಎಲ್ಲಾ ಮಾಧ್ಯಮ ಸಂಸ್ಥೆಗಳು (ಎಲೆಕ್ಟ್ರಾನಿಕ್, ಮುದ್ರಣ ಮತ್ತು ಇತರೆ) ಕಡ್ಡಾಯವಾಗಿ ಪಾಲಿಸಬೇಕು ಎಂದು ಉಪ ಮುಖ್ಯ ಚುನಾವಣಾಧಿಕಾರಿಗಳು ತಿಳಿಸಿದ್ದಾರೆ.

## ಮಾವು ಪ್ರದರ್ಶನ ಮಾರಾಟ ಮೇಳ: ಹೆಸರು ನೋಂದಾಣಿಗೆ ಸೂಚನೆ


ಹಂಪಿ ಟೈಮ್ಸ್ ಕೊಪ್ಪಳ

ಕೊಪ್ಪಳ ತೋಟಗಾರಿಕೆ ಇಲಾಖೆ ವತಿಯಿಂದ ಮೇ ತಿಂಗಳಿನಲ್ಲಿ 8ನೇ ಮಾವು ಪ್ರದರ್ಶನ ಮತ್ತು ಮಾರಾಟ ಮೇಳವನ್ನು ಆಯೋಜಿಸಲಾಗುತ್ತಿದ್ದು, ಮಳಿಗೆ ಕಾಯ್ದಿರಿಸಲು ಹೆಸರು ನೋಂದಾಯಿಸುವಂತೆ ಮಾವು ಬೆಳೆಗಾರರಿಗೆ ತಿಳಿಸಿದೆ.

## ಮತದಾನ ಜಾಗೃತಿ ರೀಲ್ಸ್ ಸ್ಪರ್ಧೆ ವಿಜೇತರಿಗೆ ಬಹುಮಾನ ಫಿಕ್ಸ್


**ಹಂಪಿ ಟೈಮ್ಸ್ ಹೊಸಪೇಟೆ**

2024ರ ಸಾರ್ವತ್ರಿಕ ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಮತದಾನ ಜಾಗೃತಿಗಾಗಿ ಜಿಲ್ಲಾ ಸ್ವೀಪ್ ಸಮಿತಿಯಿಂದ ರೀಲ್ಸ್ ಸ್ಪರ್ಧೆ ಏರ್ಪಡಿಸಲಾಗಿದೆ.



ಮೇ 7ರಂದು ಲೋಕಸಭಾ ಚುನಾವಣೆಯ ಮತದಾನ ನಡೆಯಲಿದೆ. ಜಿಲ್ಲೆಯ ಪ್ರತಿಯೊಬ್ಬ ಮತದಾರರು ಚುನಾವಣೆಯಿಂದ ಹೊರಗುಳಿಯದೆ ಕಡ್ಡಾಯ ಮತ್ತು ನೈತಿಕ ಮತದಾನ ಮಾಡುವ ಸಲುವಾಗಿ ಹಾಗೂ ಈ ಬಾರಿ ಮತದಾನ ಪ್ರಮಾಣ ಹೆಚ್ಚಿಸುವ ಉದ್ದೇಶದಿಂದ ಆಯೋಜನೆ ಮಾಡಿರುವ ಈ ರೀಲ್ಸ್ ಸ್ಪರ್ಧೆಯಲ್ಲಿ ಸಾರ್ವಜನಿಕರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಬಹುದಾಗಿದೆ.

30 ಸೆಕೆಂಡ್ ನಿಂದ 1 ನಿಮಿಷ ಮೀರದಂತೆ ಮತದಾನದ ಮಹತ್ವ ಕುರಿತು ರೀಲ್ಸ್ ವೀಡಿಯೋ ಚಿತ್ರೀಕರಿಸಿ ಏಪ್ರಿಲ್ 26ರೊಳಗೆ ಜಿಲ್ಲಾ ಪಂಚಾಯತ್ ಹೊಸಪೇಟೆ ಕಚೇರಿಯ ಮೇಲ್ ceosveepvjn@gmail.com ಹಾಗೂ ವಾಟ್ಸಪ್ ನಂಬರ್ 8660752667 ಗೆ ವೀಡಿಯೊ ಕಳುಹಿಸಬೇಕು. ಕೊನೆಯ ದಿನಾಂಕದ ನಂತರ ಸ್ವೀಕೃತವಾದ ವೀಡಿಯೊ ರೀಲ್ಸ್‌ಗಳನ್ನು ಪರಿಗಣಿಸಲಾಗುವುದಿಲ್ಲ. ಉತ್ತಮ ರೀಲ್ಸ್‌ಗೆ ಬಹುಮಾನ: ರೀಲ್ಸ್ ಸ್ಪರ್ಧೆಯಲ್ಲಿ ವಿಜೇತರಿಗೆ ಪ್ರಥಮ 5000, ದ್ವಿತೀಯ 3000 ಹಾಗೂ ತೃತೀಯ 2000 ನಗದು ಬಹುಮಾನವಿರುತ್ತದೆ ಎಂದು ಜಿಲ್ಲಾ ಸ್ವೀಪ್ ಸಮಿತಿಯ ಅಧ್ಯಕ್ಷರು ಆಗಿರುವ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಸದಾಶಿವ




## ಸಿಇಟಿ ಸ್ಪರ್ಧಾತ್ಮಕ ಪರೀಕ್ಷೆ ಬಸ್ಸಿಗಾಗಿ ವಿದ್ಯಾರ್ಥಿಗಳ ಪರದಾಟ



**ಹಂಪಿ ಟೈಮ್ಸ್ ಹೊಸಪೇಟೆ**

ಕರ್ನಾಟಕ ಪರೀಕ್ಷಾ ಪ್ರಾಧಿಕಾರವತಿಯಿಂದ ಎಂಜಿನಿಯರಿಂಗ್, ಕೃಷಿ ವಿಜ್ಞಾನ, ವೆಟರ್ನರಿ, ಫಾರ್ಮಸಿ ಹಾಗೂ ಬಿಎಸ್ಸಿ ಸೇರಿದಂತೆ ಇನ್ನಿತರ ವೃತ್ತಿಪರ ಕೋರ್ಸ್‌ಗಳ ಪ್ರವೇಶಾತಿ ಬಯಸಿ ಪರೀಕ್ಷೆ ಬರೆಯಲು ಬಂದಿದ್ದು ಸುತ್ತಮುತ್ತಲಿನ ತಾಲೂಕು, ಜಿಲ್ಲೆಯ ವಿದ್ಯಾರ್ಥಿಗಳು ಗುರುವಾರ ಬಸ್ಸಿಗಾಗಿ ಕಾದು ಹೈರಾಣಾದರು.

ಪರೀಕ್ಷೆ ಇದೆ ಎಂದಾಕ್ಷಣ ಜಿಲ್ಲಾ ಕೇಂದ್ರಗಳಿಗೆ ಹೆಚ್ಚಿನ ಬಸ್‌ಗಳು ಬಿಡಬೇಕು. ಉಚಿತ ಪ್ರಯಾಣವಿರುವುದರಿಂದ ಪ್ರಯಾಣಿಕರ ಸಂಖ್ಯೆಯೂ ಈಗಾಗಲೇ ಇಮ್ಮಡಿಗೊಂಡಿದದೆ. ಬಸ್ಸ್‌ಗಳ ಕೊರತೆ ಹೇಳತೀರದ್ದಾಗಿದೆ. ಗುರುವಾರ ಪರೀಕ್ಷೆ ಬರೆದು ಮನೆಗೆ ತೆರಳಲು ಪರದಾಡಿದರು. ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಬಸ್‌ಗಳನ್ನು ಹೆಚ್ಚಿಸಬೇಕೆಂದು ವಿದ್ಯಾರ್ಥಿಗಳು, ಪಾಲಕರು ಸೇರಿದಂತೆ ರೆಗ್ಯುಲರ್ ಪ್ರಯಾಣಿಕರು ಆಗ್ರಹಿಸಿದ್ದಾರೆ.



## 15 ಜನರಿಗೆ ವಾಂತಿ ಭೇದಿ ಗ್ರಾಮೀಣ ಜನತೆ ವಿಚಲಿತ



**ಹಂಪಿ ಟೈಮ್ಸ್ ಕೂಡ್ಲಿಗಿ**

ತಾಲೂಕಿನ ಜಂಗಮ ಸೋವೆನಹಳ್ಳಿ ಗ್ರಾಮದಲ್ಲಿ ಕಳೆದ ನಾಲ್ಕು ದಿನಗಳಿಂದಲೂ ವಾಂತಿ, ಭೇದಿ ಪ್ರಕರಣಗಳು ಕಂಡು ಬಂದಿದ್ದು, ಗ್ರಾಮದ ಜನತೆ ಸ್ವಲ್ಪ ವಿಚಲಿತರಾಗಿದ್ದಾರೆ. ಈಗಾಗಲೇ ಅಂದಾಜು 15 ಜನರಿಗೆ ವಾಂತಿ, ಭೇದಿ ಕಾಣಿಸಿಕೊಂಡ ಹಿನ್ನೆಲೆಯಲ್ಲಿ ತಕ್ಷಣ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆದಿದ್ದಾರೆ.

ಸುದ್ದಿ ತಿಳಿದು ತಕ್ಷಣ ತಾಲೂಕು ಆರೋಗ್ಯಾಧಿಕಾರಿ ಎಸ್.ಪಿ.ಪ್ರದೀಪ್ ಕುಮಾರ್ ಸಿಬ್ಬಂದಿಗಳ ಕಳುಹಿಸಿ ಸರ್ವೆ ಮಾಡಿ ಗ್ರಾಮದ ಜನರ ಆರೋಗ್ಯ ತಪಾಸಣೆ ಕೈಗೊಂಡಿದ್ದಾರೆ. ಈ ಕುರಿತು ಡಾ.ಎಸ್.ಪಿ. ಪ್ರದೀಪ್ ಕುಮಾರ್ ಮಾತನಾಡಿ, ಈಗಾಗಲೇ ಆಸ್ಪತ್ರೆಯ ಆರೋಗ್ಯ ಸಿಬ್ಬಂದಿಗಳು ಗ್ರಾಮದಲ್ಲಿ ಬೀಡುಬಿಟ್ಟು ಮನೆ ಮನೆಗೆ ತೆರಳಿ ಆರೋಗ್ಯ ಶಿಕ್ಷಣ ನೀಡುತ್ತಿದ್ದಾರೆ. ಯಾವುದೇ ಕಾರಣಕ್ಕೂ ತೆರದಿಟ್ಟ ಹೊರಗಿನ ಆಹಾರವನ್ನು ತಿನ್ನದಂತೆ ತಿಳಿಸಿದ್ದು, ಗ್ರಾಮಕ್ಕೆ ಪೂರೈಕೆಯಾಗುವ ಕೊಳವೆ ಬಾವಿ ಹಾಗೂ ನೀರಿನ ಸಂಗ್ರಹ ತೊಟ್ಟಿಗೆ ಕ್ಲೋರಿನೇಷನ್ ಮಾಡಲು ಗ್ರಾಪಂ ಪಿಡಿಒಗೆ ತಿಳಿಸಿ, ನೀರಿನ ಮಾದರಿ ಪರೀಕ್ಷೆಗೆ ಕಳುಹಿಸಲಾಗಿದೆ. >>4




## ಬೆಳಕಿನ ಹಾದಿ

# ಸವ್ಯಸಾಚಿಯಂತೆ ಏಕಾಗ್ರತೆ ಮತ್ತು ಧೃಡತೆ



ವಿದ್ಯಾರ್ಥಿಗಳಿಗೆ, ಪರೀಕ್ಷಾರ್ಥಿಗಳಿಗೆ, ಇನ್ಯಾವುದೇ ಕೆಲಸದಲ್ಲಿರಲಿ ಅಲ್ಲಿ ಯಶ ಸಾಧನೆಗೆ, ಕಾರ್ಯದಲ್ಲಿ ಧೃಢತೆ, ಕಲಿಕೆಗೆ ಏಕಾಗ್ರತೆ, ಮನಸ್ಸಿನ ಧೃಡಚಿತ್ತತೆ ಬೇಕೇ ಬೇಕಾಗುವುದು. ಏಕಾಗ್ರತೆ, ಧೃಡತೆಗೆ ಮತ್ತೊಂದು ಹೆಸರೇ, ಸವ್ಯಸಾಚಿ ಅರ್ಜುನ.

ನಮ್ಮ ಶಾಲೆಯಲ್ಲಿ ನಮ್ಮ ಮೇಷ್ಟ್ರು, ವಾರದ ಸಭೆಯಲ್ಲಿ, ಪರೀಕ್ಷಾ ಸಮಯದಲ್ಲಿ ಹೇಳುತ್ತಿದ್ದ ಅರ್ಜುನನ ಧೃಡತೆ, ಏಕಾಗ್ರತೆಯ ಕಥೆಯ ಬರಹ ರೂಪವಿದು.

ಪಾಂಡು ಮಹಾರಾಜ-ಕುಂತಿದೇವಿಯ ಮಕ್ಕಳಾದ ಧರ್ಮರಾಯ, ಭೀಮಸೇನ, ಪಾರ್ಥ, ನಕುಲ-ಸಹದೇವ. ಇವರುಗಳು ಗುರು ದ್ರೋಣಾಚಾರ್ಯರ ಬಳಿ, ಇತರೇ ವಿದ್ಯಾರ್ಥಿಗಳೊಂದಿಗೆ ಬಿಲ್ವಿದ್ಯೆ, ಶಬ್ದವೇದಿಯಂತಹ ಕ್ಷಾತ್ರವಿದ್ಯೆಗಳನ್ನು ಕಲಿಯುತ್ತಿದ್ದ, ವಿದ್ಯಾರ್ಥಿದೆಸೆಯ ಸಮಯ.

ಒಮ್ಮೆ ದ್ರೋಣಾಚಾರ್ಯರು, ತಮ್ಮ ಶಿಷ್ಯಂದಿರಿಗೆ ಬಿಲ್ವಿದ್ಯೆಗೆ ಬೇಕಾಗುವ, ಏಕಾಗ್ರತೆಯ ಪರೀಕ್ಷೆ ಒಡ್ಡಿದರು. ಏನೆಂದರೆ, ಮರದಲ್ಲಿ ಕೂತಿದ್ದ ಪಕ್ಷಿಗೆ, ಬಾಣಬಿಟ್ಟು ಹೊಡೆದು ಉರುಳಿಸುವುದು. ದ್ರೋಣಾಚಾರ್ಯರು ತಮ್ಮ ಪ್ರತಿ ಶಿಷ್ಯಂದಿರನ್ನು ಕೇಳಿದ್ದು, 'ಮರದಲ್ಲಿ ಏನು ಕಾಣಿಸುತ್ತಿದೆ?' ಎಂದು. ಪ್ರತಿ ಶಿಷ್ಯರು ಒಬ್ಬೊಬ್ಬರಾಗಿ, "ಮರದಲ್ಲಿ ಹಣ್ಣು ಕಾಣಿಸುತ್ತಿದೆ, ಮರದಲ್ಲಿ ಎಲೆ ಇದೆ, ಹೂಗಳು ಕಾಣಿಸ್ತಿವೆ,ಕಾಯಿ ಕಾಣುತ್ತಿದೆ"ಎಂದು, ಒಬ್ಬೊಬ್ಬರು ಒಂದೊಂದಾಗಿ ಹೇಳಿದರೆ, ಮತ್ತೂ ಕೆಲವರು "ಪಕ್ಷಿ ಕೂತಿರುವುದು ಕಾಣಿಸುತ್ತಿದೆ, ಹಕ್ಕಿ ರೆಕ್ಕೆ ಅಲ್ಲಾಡಿಸುತ್ತಿದೆ" ಎಂದು ಹೇಳಿದರು. ಅರ್ಜುನನ್ನು ಕೇಳಲಾಗಿ, "ಪಕ್ಷಿಯ ಕಣ್ಣಿನ ಹೊರತು ಮತ್ತೇನೂ ಕಾಣಿಸುತ್ತಿಲ್ಲ" ಎಂದನು.

ಪಕ್ಷಿಯನ್ನುಳಿದು 'ಹಣ್ಣು, ಎಲೆ, ಹೂ ಕಾಣಿಸುತ್ತಿದೆ', ಎಂದ ಉಳಿದವರು, ಪಕ್ಷಿಗೆ ಬಾಣ ಬಿಡಲಾಗಲಿಲ್ಲ. ಆದರೆ " ಪಕ್ಷಿಯ ಕಣ್ಣು ಮಾತ್ರ ಗೋಚರಿಸುತ್ತಿದೆ" ಎಂದು, ಕಣ್ಣನ್ನು ಕೇಂದ್ರೀಕರಿಸಿ ಬಾಣ ಬಿಟ್ಟ ಅರ್ಜುನನು, ಪಕ್ಷಿಯನ್ನು ಹೊಡೆದುರುಳಿಸಿ, ಗುರುಗಳು ಒಡ್ಡಿದ ಏಕಾಗ್ರತೆ ಪರೀಕ್ಷೆಯಲ್ಲಿ ಉತ್ತೀರ್ಣನಾಗಿದ್ದನು. ಬಿಲ್ವಿದ್ಯೆ ಪಾರಾಂಗತನಾಗಿ, ಎರಡೂ ಕೈಗಳಿಂದ ಬಿಲ್ಲು ಬಿಡುತ್ತಿದ್ದರಿಂದ, ಸವ್ಯಸಾಚಿಯಾಗಿ, ಸದಾ ವಿಜಯಿಶಾಲಿಯಾಗುತ್ತಿದ್ದ ಅರ್ಜುನನಿಗೆ "ಅತಿರಥ", "ವಿಜಯ" ಇತ್ಯಾದಿ ಹೆಸರುಗಳು ಅನ್ವರ್ಥವಾಗಿದ್ದವು. ಅರ್ಜುನನಂತೆ ಏಕಾಗ್ರತೆ, ಏಕಚಿತ್ತತೆ ವಿದ್ಯಾಭ್ಯಾಸದಲ್ಲಿ ಪ್ರತಿ ವಿದ್ಯಾರ್ಥಿಗೂ ಅತ್ಯಗತ್ಯ. ಕೌಟುಂಬಿಕ ಸಂದರ್ಭಗಳನ್ನು ಹೊರತುಪಡಿಸಿ, ಬಾಹ್ಯಾಕರ್ಷಣೆಗಳಿಗೆ ಸಿಲುಕದೇ, ಅದರ ಬಗೆಗೆ ಗಮನ ನೀಡದೇ, ಅನಾವಶ್ಯಕ ಅಲೆದಾಟ ಕಡಿಮೆಗೊಳಿಸಿ, ಅವರ ವಿದ್ಯಾರ್ಥಿ ದೆಸೆಯಲ್ಲಿ ಅನುಪಯುಕ್ತ ಎನಿಸುವ, ಜಾಲತಾಣಗಳ ಬಲೆಯ ಗೀಳಿಗೆ ಸಿಲುಕದೇ,ಧೃಡ ಚಿತ್ತರಾಗಿ, ಏಕಾಗ್ರತೆಯಿಂದ ತಮ್ಮ ಶಿಕ್ಷಣ ಅಭ್ಯಾಸ ಕ್ರಮಗಳಲ್ಲಿ ತೊಡಗಿ ಯಶಸ್ಸು ಸಾಧಿಸಿದರೆ, ಅದೇ ನಾವು ಕಲಿಸಿದ ಗುರುಗಳಿಗೆ ಕೊಡುವ ಕಾಣಿಕೆ, ಗೌರವ. ಮಕ್ಕಳ ಆ ಯಶಸ್ಸೇ ತಂದೆ-ತಾಯಿಗಳಿಗೆ ಉಡುಗೊರೆಯಾಗುವುದು.

– **ಲೀಲಾವತಿ** ವಿಜಯಕುಮಾರ
ಅಂಕಸಮುದ್ರ

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ. **ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊದ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ-ಮೇಲ್:hampitimes@gmail.com
M: 9448633038

ಜಾಹೀರಾತಿಗಾಗಿ ಸಂಪರ್ಕಿಸಿ:
**Contact for EVENT COVERAGE & Advertisements in Leading News Paper**
**9448633038**

**ಹಂಪಿ ಟೈಮ್ಸ್**
ವಿಜಯನಗರದ ಹೆಮ್ಮೆ
ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ
www.hampitimes.com
epaper.hampitimes.com

# ತಾತ ಏನಾರ ತರ್ಲಾ ತಿನ್ನಾಕೆ

ಇನ್ನು ಸಾಕಾಯ್ತು ಕಣೋ ನನ್ ಕೈಲಿ ಆಗಲ್ಲ ಮನೆಗೆ ಹೋಗೋಣ ನಡಿ" ರಂಗನಾಥ ಅಯಾಸಪಡುತ್ತಾ ಆ ಹುಡುಗನಿಗೆ ಅಲವತ್ತುಕೊಂಡ..

"ತಾತ,ಇನ್ನೆರಡು ದಿನ, ಆಮೇಲೆ ಡಿಸ್ಚಾರ್ಜ್ ಮಾಡ್ತಾರಂತೆ. ಡಾಕ್ಟರ್ ನ ನಾನು ಕೇಳಿ ಬಂದೀನಿ" ಆ ಹುಡುಗ ಮನೋಜ್ ಹೇಳಿದ.. ರಂಗನಾಥ ಕೇಳಲಿಲ್ಲ. ಆಸ್ಪತ್ರೆ ಯಿಂದ ಹೊರಬಂದುಬಿಟ್ಟ..

ಮನೋಜ್ ರಂಗನಾಥನ ಸಂಬಂಧಿ ಅಲ್ಲ. ಮನೋಜ್ ರಂಗನಾಥನ ಪಕ್ಕದ ಮನೆಯ ಹುಡುಗ,.ಹುಡುಗ ಅಂದರೆ ಇಪ್ಪತ್ತೇಳು ವಯದವ.. ರಂಗನಾಥ ನಿಗೆ ಬರೋಬ್ಬರಿ ಎಂಬತ್ತು ವರ್ಷ. ವಿಪರೀತ ಅಯಾಸ ಕೆಮ್ಮು... ಮೈಯಲ್ಲಿ ಶಕ್ತಿ ಇಲ್ಲ..

ಸಮಯಕ್ಕೆ ಸರಿಯಾಗಿ ಊಟ ಇಲ್ಲ.ಮಕ್ಕಳಿಬ್ಬರು ಸಂಸಾರ ಸಮೇತ ವಿದೇಶದಲ್ಲಿ – ಒಬ್ಬನು ಆಸ್ಟ್ರೇಲಿಯಾ, ಮತ್ತೊಬ್ಬನು ಜರ್ಮನಿ,ಅಪ್ಪ ಮಾತ್ರ ಇಂಡಿಯಾದಲ್ಲಿ..

ಬೇರೆ ದೇಶದ ನೀರು ಅಪ್ಪನಿಗೆ ಹಿಡಿಯಂಗಿಲ್ಲ,ಅಲ್ಲಿಯ ವಾತಾವರಣ ಅಪ್ಪನಿಗೆ ಆಗಲ್ಲ.ಅಪ್ಪ ತಮ್ಮಲ್ಲಿದ್ದು ಅನಾರೋಗ್ಯ ಪೀಡಿತನಾಗೋದು ಮಕ್ಕಳಿಗೆ ನೋಡೋಕಾಗಲ್ವಂತೆ.



ಮಹಿಮ
ಲೇಖಕರು, ರಾಯಚೂರು

Scan For Digital Colourful
HAMPI TIMES E-paper

ವರ್ಷಕ್ಕೆ ಒಂದೆರಡು ಬಾರಿ ಫೋನು ಮಾಡುವ ಮಕ್ಕಳು.. ಇದಕ್ಕಿಂತ ಸುಖ ಬೇಕಾ?

ಊರಲ್ಲಿ ಇರುವ ತುಂಡು ಭೂಮಿ ಗುತ್ತಿಗೆ ಹಣದಲ್ಲಿ ಅವರಪ್ಪನ ಜೀವನ...

ಹೇಳಿಕೊಳ್ಳೋಕೆ ಮಕ್ಕಳು ವಿದೇಶದಲ್ಲಿ..ಈ ಪರದೇಶಿ ಸ್ಥಿತಿ ದೇವರೇ ಬಲ್ಲ.. ಅಕ್ಕಪಕ್ಕದವರೇ ಪಾಪ ಅನ್ನಬೇಕು..ಈಚೀಚೆಗೆ ಮಕ್ಕಳ ಫೋನ್ ಬಂದ್ರೆ ಅತ ಮಾತಾಡುತ್ತಿಲ್ಲ

"ಥೂ..ನೀಚರು ನಾನು ಮಾತಾಡಲ್ಲ ಕಣೋ ಮನೋಜಾ,ಅವರಿಗೆ ಹೇಳಿಬಿಡು ಮತ್ತೆ ಯಾವತ್ತು ಫೋನ್ ಮಾಡಬಾರದು ಅಂತ..ನಿಮ್ಮಪ್ಪನೇ ಹಿಂಗೆ ಹೇಳಿದಾನೆ ಅನ್ನು.. ನಿಮ್ಮಪ್ಪ ನಿಮ್ ಪಾಲಿಗೆ ಸತ್ತಂಗೆ..ನೀವು ನಿಮ್ಮಪ್ಪನ ಪಾಲಿಗೆ ಸತ್ತಂಗೆ ಅಂತ ಹೇಳು ಅನ್ನುವಾಗ ರಂಗನಾಥನ ಕಣ್ಣಾಲಿಗಳು ತುಂಬಿ ಬಂದಿದ್ದವು..



ಮನೋಜ್ ಹಾಗೇ ಹೇಳಿಬಿಟ್ಟಿದ್ದ.ಈಗ ಎರಡು ವರ್ಷಗಳಾದವು ಮಕ್ಕಳು ಸಹಿತ ಫೋನ್ ಮಾಡುತ್ತಿಲ್ಲ.ರಂಗನಾಥ ಅವರ ಫೋನ್ ಗೂ ಕಾಯುತ್ತಿಲ್ಲ..

ಒಂದು ದಿನ ಮನೋಜ್ ರಂಗನಾಥನ ಮನೆಗೆ ಬಂದ

"ತಾತ ಏನಾರ ತರ್ಲಾ ತಿನ್ನಾಕೆ"

"ಬೇಡ ಮಗಾ,ಅಸಿವೇ ಇಲ್ಲದಂಗಾಗೇತೆ"

"ಯಾಕ್ ತಾತ"

"ಅಂಗೇ ಕಣ್ ಮಗಾ"

"ಸಂಕೋಚಾನಾ"

"ನಿನ್ನತ್ರ ಸಂಕೋಚವಾ ಮಗಾ" ರಂಗನಾಥನ ಗಂಟಲುಬ್ಬಿ ಬಂತು ಕಣ್ಣೀರ ಹನಿಗಳು ನಿರಂತರವಾಗಿ ಜಾರತೊಡಗಿದವು..

"ನೀನು ಯಾವಾಗ್ಲೂ ಅಂಗೇ ಬುಡು ತಾತ..ಅಂಗ್ಯಾಕ ಅಳ್ತೀಯ..ಓ ನಾನಿಲ್ವಾ ನಿಂಗೆ" ಅಂದ ಮನೋಜ

ಮನೋಜಾ

ಏನ್ ತಾತ

"ಈ ಗಂಡು ಮಕ್ಕಳನ್ನು ಹೆರೋದಕಿನ್ನ ಹೆಣ್ ಮಗೀನ ಹೆರಬೇಕಾಗಿತ್ತು ಕಣ್ಲಾ,ಹೆಣ್ ಮಗೀ ಅಗಿದ್ರೆ ಅಪ್ಪ ಅಂತ ಮರುಗೋವು,ನಾನು ಆ ನಸೀಬು ಪಡಕೊಂಡು ಬರ್ಲಿಲ್ಲ ಕಣ್ಲಾ..ಗಂಡು ಮಕ್ಕಳು ಎಲ್ಲಾ ಹಂಗೇ ಮನೋಜಾ, ಅಪ್ಪನದು ಎಲ್ಲಾ ಬೇಕು..ಅವನು ಬ್ಯಾಡ.. ಅವನು ಕಾಲ ಕಸ..ನನಗೇನು ಸಂಪಾಸಿದೆ ಅಂತಾರ..ಎಣ ಕೆಡವುತಾರ..ಜೋರು ಮಾಡ್ತಾರ..ಕಾಲ ಕಸ ಮಾಡ್ತಾರ ಮನೋಜಾ.. ಎಣ್ ಮಗೀ ಇದ್ದಿದ್ರೆ ಅಪ್ಪಾ ಅಂತ ಓಡಿ ಬರೋಳು.ಹೆಣ್ಣಿಗಿದ್ದ ಕರುಳು ಗಂಡಿಗೆ ಇರಂಗಿಲ್ಲ ಮನೋಜಾ"

ರಂಗನಾಥ ಅಳತೊಡಗಿದ "ತಾತ ಈಗ ಸುಮ್ನೆ ಇರ್ತೀಯೋ ಇಲ್ಲೋ" ಮನೋಜ ತಾತನನ್ನು ಮೃದುವಾಗಿ ಸಮಾಧಾನಿಸಿ ತಾತನ ಕಣ್ಣೊರೆಸಿದ..

"ಮಕ್ಕಳಿಗೆ ಎಲ್ಲಾ ಕಳಕೊಂಡೆ...ಎಲ್ಲೋ ದೂರ ಅದಾರ..ಚನ್ನಾಗಿರ್ಲಿ ಬುಡು..ನನ್ ಎಣಾ ಊಳಾಕ ತುಂಡು ಭೂಮೀನರ ಉಳಿಸ್ಯಾರ ಅಷ್ಟು ಸಾಕು ಬುಡು..ಮನೋಜಾ,

ನಿನಗೂ ಎಣ್ ಮಗಿ ಆಗ್ಲಿ ಕಣ್ಲಾ..ಈ ಗಂಡು ಮಕ್ಕಳ ಸಾವಾಸಾನೇ ಬ್ಯಾಡ" ಅಜ್ಜ ದಿಟ್ಟ ದನಿಯಿಂದ ನುಡಿದ

"ಅಂಗೇ ಅಗ್ಲಿ ಬುಡು ತಾತ.ಈ ಸಲ ನನಗ ಎಣ್ ಮಗೀನೇ ಅಗ್ಲಿ, ನಿನ್ ಆಶೀರ್ವಾದ ತಾತ "ಅಂದ ಮನೋಜ

"ಅಜ್ಜ ಸ್ವಲ್ಪ ಮಜ್ಜಿಗೆ ಅನ್ನ ತರ್ಲೇನು.ಬ್ಯಾಡ ಅನಬ್ಯಾಡ..ಊಟ ಮಾಡಿ ಗುಳಿಗಿ ನುಂಗು" ಮನೋಜ ಅಲವತ್ತಿಕೊಂಡ..

"ಆತು ಮಗಾ ನಿನ್ ಮಾತು ಮೀರಾಕಾದೀತಾ" ಅಜ್ಜ ಒಪ್ಪಿಗೆ ನೀಡಿದ ಮನೋಜ ಅಜ್ಜನಿಗೆ ಊಟ ತಂದು ಊಟ ಮಾಡಿಸಿ ಗುಳಿಗಿ ನುಂಗಿಸಿ

"ಬರ್ಲಾ ಅಜ್ಜ "ಅಂದು ಹೊರಟ..

ಬೆಳಗಾಯಿತು..ಅಜ್ಜ ಮನೆಯಲ್ಲಿ ಕಾಣುತ್ತಿಲ್ಲ..ಮನೋಜ ಊರೆಲ್ಲಾ ಹುಡುಕಿದ..ಯಾರೋ ಹೇಳಿದರು ಅಜ್ಜ

ತಮ್ಮ ಹೊಲದ ಕಡೆ ನಡೆದ ಅಂತ..ಮನೋಜ ಒಂದೇ ಉಸಿರಿಗೆ ಓಡಿದ..ಅಜ್ಜ ತನ್ನ ತುಂಡು ಭೂಮಿಯಲ್ಲಿ ಬೋರಲು ಬಿದ್ದಿದ್ದ.. ಅಜ್ಜನ ಕೋಲು ದೂರದಲ್ಲಿ ಬಿದ್ದಿತ್ತು.."ಅಜ್ಜಾ "ಅಂತ ಮನೋಜ ಕೂಗಿ ಬಡಿದೆಬ್ಬಿಸಲು ಹೋದ..

ಅಜ್ಜ ಯಾವಾಗಲೋ ನಿರುತ್ತರನಾಗಿ ಹೋಗಿದ್ದ

# ಯಶಸ್ಸು-ಸಂತೃಪ್ತಿ

ಬಾಳಿನ ದಾರಿಯಲ್ಲಿ ಯಶಸ್ಸು ಮತ್ತು ಸಂತೃಪ್ತಿಗಳು ಒಂದಕ್ಕೊಂದು ಪೂರಕ. ಸಂತೃಪ್ತಿ ಬೇಕೆಂದರೆ ಯಶಸ್ಸನ್ನು ಪಡೆಯಬೇಕು. ಯಶಸ್ಸನ್ನು ಹೊಂದಿದಾಗ ಆತ್ಮತೃಪ್ತಿ ಉಂಟಾಗುತ್ತದೆ. ಯಶಸ್ಸು ಪ್ರತಿಷ್ಠೆಗೆ ಸಂಬಂಧಪಟ್ಟಿದ್ದು. ಸಂತೃಪ್ತಿ ಹೃದಯಕ್ಕೆ ಸಂಬಂಧಪಟ್ಟಿದ್ದು. ಒಂದು ಆತ್ಮರತಿಯನ್ನು ಹೆಚ್ಚಿಸುತ್ತದೆ. ಇನ್ನೊಂದು ಆತ್ಮಸುಖವನ್ನು ನೀಡುತ್ತದೆ. ಸಂತೃಪ್ತಿಗಾಗಿ ಯಶಸ್ಸಿನ ಹಾದಿಯಲ್ಲಿ ಪ್ರಯಾಣ ಮಾಡಲೇಬೇಕು. ಜೀವನದಲ್ಲಿ ಯಶಸ್ಸು ಮುಖ್ಯವೋ ಸಂತೃಪ್ತಿ ಮುಖ್ಯವೋ ಎಂದಾಗ ಸರಳವಾಗಿ ಉತ್ತರಿಸಲು ಆಗುವುದಿಲ್ಲ. ಯಶಸ್ಸನ್ನು ಪಡೆಯುವಾಗ ಬದುಕನ್ನು ಯಂತ್ರವಾಗಿರಿಸಿಕೊಳ್ಳುವುದು ಬೇಡ ಮಂತ್ರವಾಗಿರಿಸಿಕೊಳ್ಳೋಣ.

ಯಶಸ್ಸು ಪಡೆಯುವಾಗ ಏಕಾಂಗಿಯಾದೆ ಎಂದು ಕೊರಗಬೇಕಾದ ಅವಶ್ಯಕತೆಯಿಲ್ಲ. ಯಶಸ್ಸು ಪಡೆಯಲು ಯಾವುದೇ ರಾಜಮಾರ್ಗಗಳಿಲ್ಲ. ಆದರೆ ಯಶಸ್ಸನ್ನು ಪಡೆದ ಬಳಿಕ ಪ್ರತಿಯೊಂದು ನಮ್ಮ ಚಲನವಲನ ಇತರರಿಗೆ ರಾಜಮಾರ್ಗವಾಗಬಹುದು. ಯಶಸ್ಸಾಗಲಿ ವೈಫಲ್ಯವಾಗಲಿ ಅಂತಿಮವಲ್ಲ. ಯಶಸ್ಸು ದೊರೆತಾಗ ವೈಫಲ್ಯದ ಎಚ್ಚರಿಕೆಯಿರಲಿ.

ಯಶಸ್ಸಿನತ್ತ ದಾಪುಗಾಲು ಹಾಕುವಾಗ ಜಗತ್ತು ನಮ್ಮನ್ನು ಕೆಳಕ್ಕೆ ನೂಕಿ ನಗುತ್ತಾ ಮಂಡಿಯೂರಿ ಕುಳಿತುಕೊಳ್ಳುವಂತೆ ಮಾಡುತ್ತದೆ. ಆದರೂ ಚಿಂತೆಯಿಲ್ಲ, ಸರ್ವಶಕ್ತನಿಗೆ ಮೊರೆಯಿಡಲು ಮಂಡಿಯೂರಿ ಪ್ರಾರ್ಥಿಸುವ ಭಂಗಿ ದೊರೆತಂತಾಯಿ ತೆಂದೇ ಭಾವಿಸಿ ಕೊಳ್ಳೋಣ. ಕೇವಲ ಶಾಲಾಕಾಲೇಜುಗಳಲ್ಲಿ ಅಗ್ರಶ್ರೇಣಿ ಪಡೆದು ತೇರ್ಗಡೆಯಾಗಿ ಯಶಸ್ಸು ಪಡೆದರೆ ಸಾಲದು. ಜೀವನದ ಶಾಲೆಯಲ್ಲಿ ಸಮಾಜವೆಂಬ ಕಾಲೇಜಿನಲ್ಲಿ ಲೋಕೋಭಿ ನ್ನರುಚಿಯ ಜನಗಳ ಮಧ್ಯೆ ತಕ್ಕಹಾಗೆ ಬದುಕುವುದೂ ಒಂದು ಸಾಧನೆ.

ಹರಿವ ನದಿಗೆ ಅಡೆತಡೆಗಳೇನಾದರೂ ಬಂದರೆ ಅದು ನಿಲ್ಲುವುದಿಲ್ಲ. ಬದಲಾಗಿ ಮಾರ್ಗ ಬದಲಿ ಸುತ್ತಾ ಮುಂದೆ ಸಾಗುತ್ತದೆ. ಹಾಗೆ ಅಡ್ಡಿಗಳು ಬಂದಾಗ ಆತಂಕ ಪಡದೇ ಆನಂದದಿಂದ ಅದರ ನಿವಾರಣೆಗೆ ಯತ್ನಿಸುವುದು. ಯಶಸ್ಸು ದೊರೆಯಲಿಲ್ಲವೆಂದು ಕಣ್ಣು ಮುಚ್ಚಿ ಕುಳಿತರೆ ಅಥವಾ ಕಣ್ಣೀರು ಹಾಕುತ್ತಾ ಇದ್ದರೆ ಮತ್ತೊಂದು ಅವಕಾಶ ಗೋಚರಿಸದೇ ಇರಬಹುದು. ಯಶಸ್ಸು ಗಳಿಸುವ ಮುನ್ನ ಅಥವಾ ಆ ದಾರಿಗೆ ಹೋಗುವ ಮುನ್ನ ಯಾವ ಕ್ಷೇತ್ರ ಸರಿಯಾದುದು ಎಂಬ ಸ್ಪಷ್ಟ ನಿಲುವು ಅರಿಯಬೇಕಾಗುತ್ತದೆ. ಆಗ ಮಾಡುವ ಎಲ್ಲ ಕೆಲಸಗಳು ಮತ್ತು ಆಲೋಚನಗೆಳು ಅದಕ್ಕೆ ಪೂರಕವಾಗಿ ಬದಲಾಗುತ್ತಾ ಹೋಗುತ್ತವೆ.

ಇಲ್ಲಿ ಸೋಲು-ಗೆಲುವುಗಳು ಸಹಜ. ಸೋತಾಗ ಕೈಚೆಲ್ಲಬಾರದು ಗೆದ್ದಾಗ ಬೀಗಬಾರದು. ಸಕರಾತ್ಮಕ ಧೋರಣೆಯಿಂದ ಸದಾ ಯಶಸ್ಸು ಸಿಗದಿರಬಹುದು. ಆದರೆ ಅದರಿಂದ ನಮ್ಮ ಒಡನಾಟದಲ್ಲಿರುವ ಕೆಲವರ ಮೇಲೆ ನಮ್ಮ ಪ್ರಭಾವವಾದರೂ ಆಗಬಹುದು. ಈ ಸಂದರ್ಭದಲ್ಲಿ ನಾವು ಪ್ರಾಮಾಣಿಕರಾಗಿದ್ದರೆ ಅಪರಿಚಿತರ ಬಿರುನೋಟವನ್ನೆದುರಿಸಲು ಹೆದರಬೇಕಾದ ಅಗತ್ಯವಿಲ್ಲ.



ಡಾ. ರಾಜಶೇಖರ ಜಮದಂಡಿ,
ಲೇಖಕರು ಮೊ: 9448441471

Scan For Digital Colourful
HAMPI TIMES E-paper

ನಿತ್ಯ ಮಾಡುವ ಸಣ್ಣ ಕೆಲಸಗಳಿಗಾಗಿ ಅಮೂಲ್ಯವಾದ ಸಮಯ ಮತ್ತು ಶಕ್ತಿಯನ್ನು ಅನಾವಶ್ಯಕ ವ್ಯಯ ಮಾಡುವುದಕ್ಕಿಂತ, ನಿಧಾನವಾದರೂ ದೊಡ್ಡ ಕೆಲಸಗಳಿಗೆ ಸರಿಯಾದ ಸಮಯ ವ್ಯಯ ಮಾಡಿ ಬದುಕನ್ನು ರೂಪಿಸಿಕೊಳ್ಳುವುದು. ನಾವು ನುಣುಪಾದ ರಸ್ತೆಯಲ್ಲಿ ವಾಹನ ಓಡಿಸಿದರೆ ಉತ್ತಮ ಡ್ರೈವಿಂಗ್ ಮಾಡಿದಂತಾಗುವುದಿಲ್ಲ. ರಸ್ತೆಯಲ್ಲಿ ಅಡೆತಡೆಗಳಿದ್ದಾಗ ಚಾಣಾಕ್ಷತೆಯಿಂದ ವಾಹನ ಓಡಿಸಿದರೆ ನಮ್ಮ ಮೈಮನ ಗಟ್ಟಿಯಾಗುತ್ತದೆ. ಆದ್ದರಿಂದ ಒಳ್ಳೆಯ ಕೆಲಸ ಮಾಡಲಿಚ್ಛಿಸಿದಾಗ ಅದರಲ್ಲಿ ನನಗೆಷ್ಟು ಲಾಭವೆಂದು ಯೋಚಿಸದಿದ್ದರೂ ತಾನಾಗಿಯೇ ಬರುತ್ತದೆ.



ಹಾಗೆಯೇ ಭವಿಷ್ಯದ ಯಶಸ್ಸಿಗಾಗಿ ಎಂದಿಗೂ ನಾವು ಕೈಗಳಲ್ಲಿರುವ ಗೆರೆಗಳನ್ನು ನಂಬಿ ಅನುಸರಿಸಬೇಕಿಲ್ಲ. ಏಕೆಂದರೆ ಜಗತ್ತಿನಲ್ಲಿ ಕೈ ಇಲ್ಲದವರು ಕಾಲಿಲ್ಲದವರು ಉಜ್ವಲ ಭವಿಷ್ಯ ರೂಪಿಸಿಕೊಂಡಿರುವವರುಂಟು. ಹೀಗಾಗಿ ಆತ್ಮವಿಶ್ವಾಸ ಮತ್ತು ನಂಬಿಕೆಯಿದ್ದರೆ ಸಾಕು. ನಾವು ಯಾವುದಾದರೂ ಕೆಲಸದಲ್ಲಿ ಯಶಸ್ವಿಯಾದಾಗ ಬೀಗುತ್ತೇವೆ. ಈ ಸ್ವಭಾವ ಸರಿಯಾದುದಲ್ಲ. ಸಮಭಾವ, ಸಮಚಿತ್ತತೆಯ ವ್ಯಕ್ತಿತ್ವ ನಮ್ಮದಾಗಿರಲಿ.

ಹೇಗೆ ಶ್ರೀಗಂಧದ ಮರವು ಬೇರಿನಿಂದ ಕೊಂಬೆಯ ತುದಿಯವರೆಗೆ ತನ್ನ ಸುವಾಸನೆಯನ್ನಿಟ್ಟುಕೊಂಡಿರುತ್ತದೆಯೋ ಹಾಗೆಯೇ ಕೈಗೊಳ್ಳುವ ಕಾಯಕದಲ್ಲಿ ದೃಢತೆ, ಪ್ರಾಮಾಣಿಕತೆ, ಪ್ರಯತ್ನ ತುಂಬಿರಬೇಕು. ಈ ಸಂದರ್ಭದಲ್ಲಿ ಯಾವಾಗಲು ಒಳದಾರಿಯಿಂದ ಮೇಲೆ ಬರುವ ಆಲೋಚನೆಗಳಿಗೆ ಸಿಲುಕದೆ, ಶ್ರಮದಿಂದ ಗಳಿಸಿದ ಯಶಸ್ಸು ಮಾತ್ರ ದೀರ್ಘ ಕಾಲದವರೆಗೆ ಇರುವುದು. ಶರಣರ ಒಂದು ವಚನ ಹೀಗಿದೆ:

'ಕಾಂಚನವೆಂಬ ನಾಯ ನೆಚ್ಚಿ ನಿಮ್ಮ ನಾನು ಮರೆದೆನಯ್ಯಾ, ಕಾಂಚನಕ್ಕೆ ವೇಳೆಯಿಲ್ಲದೆ ಲಿಂಗಕ್ಕೆ ವೇಳೆಯಿಲ್ಲ' ಅಂದರೆ ಹಣದಾಸೆಗಾಗಿ ತನ್ನತನ ಕಳೆದುಕೊಳ್ಳುವುದು ಸರಿಯಲ್ಲ.

ಯಶಸ್ಸಿನ ಸಂದರ್ಭದಲ್ಲಿ ನಮಗೆಷ್ಟು ಬೇಕೋ ಅಷ್ಟು ಹಣವನ್ನು ನಾವು ಇಟ್ಟುಕೊಳ್ಳಬಹುದು. ಹೆಚ್ಚು ಹಣದ ಆಸೆಗೆ ಒಳಗಾದರೆ ಇರುವ ಸಂತೃಪ್ತಿ ಹಾಳಾಗುತ್ತದೆ. ಅಲ್ಲದೆ ಅದು ಕಳ್ಳತನ ಮಾಡಿದಂತಾಗುತ್ತದೆ.

ಹಾಗಾಗಿ ಶರಣರ ಬದುಕನ್ನು ಗಮನಿಸಿದಾಗ ಅವರು ಕಾಯಕದಿಂದ ಯಶಸ್ಸು ಪಡೆದು ದಾಸೋಹದಿಂದ ಸಂತೃಪ್ತಿ ಹೊಂದಿದವರು. ನಾವು ಹಣದ ವ್ಯಾಮೋಹಕ್ಕೆ ಬಲಿಯಾದರೆ ಮನಷ್ಯತ್ವವನ್ನೇ ಕಳೆದುಕೊಳ್ಳಬೇಕಾದೀತು. ಹಣದ ಹಿಂದೆ ಹೋಗದೇ ಮಾಡುವ ಕಾಯಕದಲ್ಲಿ ನಿಷ್ಠೆ-ನಿಯಮ ಪಾಲಿಸಿದರೆ ಹಣ ತನ್ನಿಂದ ತಾನೇ ಬರುತ್ತದೆ.

ಆಧುನಿಕ ಜಗತ್ತಿನಲ್ಲಿ ಪ್ರತಿಯೊಬ್ಬರಿಗೂ ಹಣದ ಅವಶ್ಯಕತೆ ಇದೆ. ಹಣವಿಲ್ಲದವನು ಹೆಣಕ್ಕಿಂತ ಕಡೆ ಎಂಬುದನ್ನು ಗುಣವಿಲ್ಲದವನಿಗೂ ಹೋಲಿಕೆ ಮಾಡಿಕೊಳ್ಳಬಹುದು. ನಮ್ಮ ಆಸೆಗಳನ್ನು ಪೂರೈಸಿಕೊಳ್ಳಲು ಹಣ ಎಲ್ಲರಿಗೂ ಬೇಕೇ ಬೇಕು ನಿಜ. ಆದರೆ ಹಣಕ್ಕಿಂತ ಮುಖ್ಯವಾಗಿ ಬೇಕಾಗಿರುವುದು ಒಳ್ಳೆಯ ಗುಣ. ಒಳ್ಳೆಯ ಗುಣದಿಂದ ಏನನ್ನಾದರೂ ಸಾಧಿಸಬಹುದು. ಹಾಗಾಗಿ ನಮ್ಮ ಬದುಕಿನ ಬಹುಭಾಗವನ್ನು ಸಮಾಜದಲ್ಲಿ ಸತ್ಕಾರ್ಯ ಮಾಡುವುದರ ಮೂಲಕ ಆತ್ಮತೃಪ್ತಿ ಪಡೆಯೋಣ.

## ಕವಿ ಮನಸು

### ಗುರುಗಳ ನೆನೆಯುತ್ತಾ

ಅರಿವನು ಮೂಡಿಸಿ ಬದುಕಿನ ಪಯಣದ
ಗುರಿಯನು ತೋರಿದರಂದು
ಗುರುಗಳ ನೆನೆಯುವೆ ಭಕ್ತಿಯ ವಂದನೆ
ಚರಣಕೆ ನಮಿಸುವೆನಿಂದು

ಹುಲ್ಲಿನ ಹೂವಿದು ಬದಲಿಹುದಿಂದಿಗೆ
ಮಲ್ಲಿಗೆ ಪರಿಮಳ ಪುಷ್ಪ
ಕಲ್ಲಿಗೆ ರೂಪವ ನೀಡಿದ ಗುರುವಿಗೆ
ಸಲ್ಲಿಸೆ ಭಕ್ತಿಯ ಬಾಷ್ಪ

ಮಣ್ಣಿನ ಮುದ್ದೆಯ ಹದವನುಗೊಳಿಸುತ
ತಣ್ಣನೆ ಮನದಲಿ ಬಂದು
ಕಣ್ಣಿಗೆ ಚೆಂದದ ಬೊಂಬೆಯನಾಗಿಸೆ
ಬಣ್ಣವ ಬಳಿದರು ಬಂಧು

ತೀರಿಸಲಾಗದು ಗುರುಗಳ ಋಣವನು
ಕೋರಿಕೆ ಸಲಿಸುವೆ ಗುರುವೆ
ತೋರಿದ ಹಾದಿಲಿ ಮರೆಯದೆ ನಡೆಯುವೆ
ಜಾರದೆ ಬದುಕಿನ ನಡುವೆ॥

**– ಪೆರ್ಮುಖ ಸುಬ್ರಹ್ಮಣ್ಯ ಭಟ್**

### ಯಾವುದೂ ಶಾಶ್ವತವಲ್ಲ

ಸಿರಿವಂತ ವ್ಯಕ್ತಿ ಬದುಕಿನಲ್ಲಿ ನನಗೆ ಎಲ್ಲವೂ ಇದೇ. ನಾನು ಯಾವುದಕ್ಕೂ,ಯಾರಿಗೂ ಕೈ ಚಾಚುವ ಅವಶ್ಯಕತೆ ಇಲ್ಲ ಎಂದು ಬೀಗುತ್ತಿದ್ದ.
ಒಂದು ದಿನ ಸುರಿದ ಧಾರಾಕಾರ ಮಳೆಯಿಂದಾಗಿ, ಇಡೀ ಊರಿಗೆ ಊರೇ ನೀರಿನಲ್ಲಿ ಮುಳುಗಿತ್ತು. ಮನೆಯಲ್ಲಿ ಇದ್ದ ವಸ್ತು, ಒಡವೆ ಎಲ್ಲವೂ ನೀರಿನ ಪಾಲಾಯಿತು.
ಬದುಕಿ ಉಳಿಯುವುದೇ ದೊಡ್ಡ ವಿಷಯ ಅನಿಸಿತ್ತು. ವಿದ್ಯುತ್ ಇಲ್ಲದೆ ಕತ್ತಲೆಯಲ್ಲಿ ಊರು ಮುಳುಗಿತ್ತು. ಮರುದಿನ ಹೆಲಿಕಾಪ್ಟರ್?ನಲ್ಲಿ ಬ್ರೆಡ್, ಕುಡಿಯುವ ನೀರು ಕೊಡುವುದನ್ನು ಕಂಡು. ನನಗೆ ಹಸಿವು ಸ್ವಲ್ಪ ಕೊಡಿ ಎಂದು ತನ್ನ ಎರಡು ಕೈ ಚಾಚಿ ಬೇಡಿಕೊಂಡನು.
ಅಂದು ಅವನು ಕಳೆದು ಕಳೆದುಕೊಂಡಿದ್ದು ಸಂಪತ್ತನ್ನು ಮಾತ್ರವಲ್ಲ. ನಾನೆಂಬ ಅಹಂಕಾರವನ್ನು ಸಹ.

**– ಮಂಜುಶ್ರೀ ಮುರಳೀಧರ್.**
**ತೋರಣಗಲ್ಲು, ಬಳ್ಳಾರಿ.**

### ಕವಿತೆ.. ಕವಿತೆ..

ಕವಿತೆ.. ಕವಿತೆ..
ಎದೆ ಭಾವದ ಕವಿತೆ
ಪದ ಸವಿಯ ಕವಿತೆ
ಪ್ರಾಸ ನಾಡಿಯ ಕವಿತೆ

ಕವಿತೆ.. ಕವಿತೆ..
ಮನುಜ ಮನದ ಕವಿತೆ
ಮಾನವೀಯ ಗುಣದ ಕವಿತೆ
ನಾಡ ಮಿಡಿತ ತುಡಿತದ ಕವಿತೆ

ಕವಿತೆ.. ಕವಿತೆ..
ಹೆಣ್ಣಿನ ಬಣ್ಣನೆಯ ಕವಿತೆ
ಪ್ರಕೃತಿ ವರ್ಣನೆಯ ಕವಿತೆ
ಒಲವು ಚಲುವು ಕಾವ್ಯದ ಕವಿತೆ

ಕವಿತೆ.. ಕವಿತೆ..
ಪ್ರೀತಿ ಪ್ರೇಮದ ಕವಿತೆ
ಪ್ರಣಯ ನವೀನ ಕವಿತೆ
ಭಗ್ನ ಮಗ್ನ ತಜ್ಞ ಕವಿತೆ

ಕವಿತೆ.. ಕವಿತೆ..
ಸ್ವಾಮಿ ಭಕ್ತಿಯ ಕವಿತೆ
ದೇವ ದೇವರ ಸ್ತುತಿ ಕವಿತೆ
ಹಾಡಿ ಪಾಡಿ ನಲಿವ ಕವಿತೆ

ಕವಿತೆ.. ಕವಿತೆ..
ಭಾವ ತಪದ ಕವಿತೆ
ಪ್ರೇಯಸಿ ಮೋಹದ ಕವಿತೆ
ಪ್ರಿಯಕರ ಸಾಂಗತ್ಯ ಕವಿತೆ

ಕವಿತೆ.. ಕವಿತೆ..
ನಾಡ ನುಡಿ ನಡೆ ಕವಿತೆ
ಲೋಕ ಸುಖ ದುಃಖದ ಕವಿತೆ
ನಾಡ ಮಿಡಿತ ಹಿಡಿತದ ಕವಿತೆ

**– ಸೋ.ದಾ.ವಿರೂಪಾಕ್ಷ ಗೌಡ,**
ಹೊಸಪೇಟೆ

### ಒದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

**– ಜಾಹೀರಾತು ವ್ಯವಸ್ಥಾಪಕರು.**

**ಪ್ರತಿ ಐದು ವರ್ಷಕ್ಕೊಮ್ಮೆ ವಿಧಾನಸಭೆ ಮತ್ತು ಲೋಕಸಭೆಗಳಿಗೆ ನಡೆಯುವ ಈ ಚುನಾವಣೆಯಲ್ಲಿ 18 ವರ್ಷ ಮೇಲ್ಪಟ್ಟ ಎಲ್ಲ ಭಾರತೀಯ ಪ್ರಜೆಗಳು ಮತ ಚಲಾಯಿಸಲು ಅರ್ಹರಾಗಿದ್ದಾರೆ. ಭಾರತ ವಿಶ್ವದಲ್ಲಿಯೇ ಅತಿ ಹೆಚ್ಚು ಯುವಜನರನ್ನು ಹೊಂದಿರುವ ರಾಷ್ಟ್ರವಾಗಿದ್ದು, ಇದೀಗ ಲೋಕಸಭಾ ಚುನಾವಣೆಯು ಸನ್ನಿಹಿತವಾಗಿದ್ದು ಇಡೀ ಜಗತ್ತಿನ ಕಣ್ಣು ಭಾರತದೆಡೆಗಿದೆ.**

# ಮತದಾನ ಜಾಗೃತಿ

ಸ್ವತಂತ್ರ ಭಾರತದ ಅತಿ ದೊಡ್ಡ ಹಬ್ಬ ಚುನಾವಣೆ. ಪ್ರತಿ ಐದು ವರ್ಷಕ್ಕೊಮ್ಮೆ ವಿಧಾನಸಭೆ ಮತ್ತು ಲೋಕಸಭೆಗಳಿಗೆ ನಡೆಯುವ ಈ ಚುನಾವಣೆಯಲ್ಲಿ 18 ವರ್ಷ ಮೇಲ್ಪಟ್ಟ ಎಲ್ಲ ಭಾರತೀಯ ಪ್ರಜೆಗಳು ಮತ ಚಲಾಯಿಸಲು ಅರ್ಹರಾಗಿದ್ದಾರೆ. ಭಾರತ ವಿಶ್ವದಲ್ಲಿಯೇ ಅತಿ ಹೆಚ್ಚು ಯುವಜನರನ್ನು ಹೊಂದಿರುವ ರಾಷ್ಟ್ರವಾಗಿದ್ದು, ಇದೀಗ ಲೋಕಸಭಾ ಚುನಾವಣೆಯು ಸನ್ನಿಹಿತವಾಗಿದ್ದು ಇಡೀ ಜಗತ್ತಿನ ಕಣ್ಣು ಭಾರತದೆಡೆಗಿದೆ.

ನಮ್ಮ ಸಂವಿಧಾನವು ರೂಪಿಸಿರುವ ಪ್ರಜೆಗಳಿಂದ ಪ್ರಜೆಗಳಿಗಾಗಿ ಪ್ರಜೆಗಳಿಗೋಸ್ಕರ ಪ್ರಜೆಗಳೇ ಪ್ರಜಾಪ್ರತಿನಿಧಿಗಳನ್ನು ಆಯ್ಕೆ ಮಾಡುವ ಈ ಮಹತ್ತರ ಜವಾಬ್ದಾರಿಯ ಕಾರ್ಯ ಇದೀಗ ಭಾರತದ ಸರ್ವ ನಾಗರಿಕರ ಕೈಯಲ್ಲಿದೆ.

ನಮ್ಮ ದೇಶದಲ್ಲಿ ಆಡಳಿತಾತ್ಮಕ ವ್ಯವಸ್ಥೆಯು ಸುಗಮವಾಗಿ ಸಾಗಲು ಗ್ರಾಮ ಪಂಚಾಯಿತಿ,ಮಹಾನಗರ ಪಾಲಿಕೆ,ಜಿಲ್ಲಾ ಪಂಚಾಯಿತಿ, ವಿಧಾನಸಭಾ ಮತ್ತು ಲೋಕಸಭಾ ವ್ಯಾಪ್ತಿಯಲ್ಲಿ ಚುನಾವಣೆಗಳು ನಡೆಯುತ್ತವೆ. ಇಲ್ಲಿ ತಮ್ಮದೇ ಆದ ಆಶೋತ್ತರಗಳನ್ನು ಹೊಂದಿರುವ ಪಕ್ಷಗಳು ತಮ್ಮ ಪಕ್ಷವು ಅಧಿಕಾರಕ್ಕೆ ಬಂದರೆ ಅಭಿವೃದ್ಧಿಯನ್ನು ಕೈಗೊಳ್ಳಲು ತಾವು ತೆಗೆದುಕೊಳ್ಳಬಹುದಾದ ಕ್ರಮಗಳನ್ನು ಸೂಚಿಸುವ ವಿಷಯಗಳನ್ನು ಹೊಂದಿರುವ ಪ್ರಣಾಳಿಕೆಗಳನ್ನು ಚುನಾವಣೆ ಪೂರ್ವದಲ್ಲಿ ಬಿಡುಗಡೆ ಮಾಡುತ್ತವೆ. ಜನರ ಮೂಲಭೂತ ಅವಶ್ಯಕತೆಗಳನ್ನು ಪೂರೈಸಲು ಮತ್ತು ಜೀವನಮಟ್ಟ ಸುಧಾರಿಸಲು ಈ ಚುನಾವಣೆಗಳಲ್ಲಿ ತಂತಮ್ಮ ಪಕ್ಷಗಳಿಂದ ಭಾಗವಹಿಸುವ ಅಭ್ಯರ್ಥಿಗಳಲ್ಲಿ ಸೂಕ್ತವಾದ ಮತ್ತು ಉತ್ತಮ ಅಭ್ಯರ್ಥಿಯನ್ನು ಆಯ್ಕೆ ಮಾಡಿಕೊಳ್ಳುವ ಗುರುತರ ಜವಾಬ್ದಾರಿ ನಾವು ಪ್ರಜೆಗಳ ಮೇಲೆ ಇರುತ್ತದೆ.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper

ಸ್ವತಂತ್ರ ಭಾರತವನ್ನು ಕಟ್ಟಲು ನಮ್ಮ ಹಲವಾರು ನಾಯಕರು ಶ್ರಮಿಸಿದ್ದರು. ಭಾರತದಂತಹ ಬೃಹತ್ ದೇಶದ ಆಡಳಿತ ಸುಗಮವಾಗಿ ಸಾಗಲು ಚುನಾವಣೆಗಳ ಅವಶ್ಯಕತೆಯನ್ನು ಮನಗಂಡ ಅವರು ಸುಸ್ಥಿರ ಸರ್ಕಾರದ ಆಯ್ಕೆಗಾಗಿ ಚುನಾವಣೆಗಳನ್ನು ಪ್ರಾರಂಭಿಸಿದರು. ಇಂದಿಗೆ ಭಾರತ ಜಗತ್ತಿನ ಅತಿ ದೊಡ್ಡ ಪ್ರಜಾತಂತ್ರ ರಾಷ್ಟ್ರವಾಗಿ ರೂಪಗೊಳ್ಳುವಲ್ಲಿ ಈ ಚುನಾವಣೆಗಳು ಬಹುದೊಡ್ಡ ಪಾತ್ರವನ್ನು ವಹಿಸಿವೆ.

ಇದು ಸರ್ಕಾರದ ಕಾರ್ಯವೈ ಖರಿಯಾದರೆ ಸಾರ್ವಜನಿಕರಾಗಿ, ಪ್ರಜ್ಞಾವಂತ ನಾಗರಿಕರಾಗಿ ನಮ್ಮ ಜವಾಬ್ದಾರಿ ಮತ್ತು ಕರ್ತವ್ಯಪ್ರಜ್ಞೆ ಕೂಡ




ಅಷ್ಟೇ ಪ್ರಮುಖವಾದದ್ದು. ಚುನಾವಣೆಗೆ ಸ್ಪರ್ಧಿಸಿರುವ ಅಭ್ಯರ್ಥಿಗಳನ್ನು ಅವರ ಜಾತಿ, ಮತ, ಪಂಥಗಳನ್ನು ಪರಿಗಣಿಸದೆ ಅಭ್ಯರ್ಥಿಯ ವಿದ್ಯಾರ್ಹತೆ, ನಂಬಿಕೊಂಡ ಮೌಲ್ಯಗಳು, ಸಾಮಾಜಿಕ ಬದ್ಧತೆ ಮತ್ತು ಕಳಕಳಿಯನ್ನು, ರಾಜಕೀಯವಾಗಿ ಸಮಾಜವನ್ನು ಮುನ್ನಡೆಸುವ ಚಾಣಾಕ್ಷತೆಯನ್ನು ಕ್ಷೇತ್ರದ ಅಭಿವೃದ್ಧಿಗಾಗಿ ಅವರು ಕೈಗೊಳ್ಳಬಹುದಾದ ಕಾರ್ಯಗಳನ್ನು ಮನಗಾಣುವ ಮೂಲಕ ಗುರುತಿಸಬೇಕು. ಅಂತಹ ವ್ಯಕ್ತಿ ಯಾವುದೇ ಪಕ್ಷದಲ್ಲಿ ಇದ್ದರೂ ಕೂಡ ಆತನಿಗೆ ಮತ ಹಾಕುವ ಮೂಲಕ ನಿಮ್ಮ ಮತದ ಮೌಲ್ಯವನ್ನು ಕಾಪಾಡಿ ಕೊಳ್ಳಬೇಕು. ನಿಜವಾಗಿ ಕಾರ್ಯ ನಿರ್ವಹಿಸುವವರು ಮತದಾರರಿಗೆ ಹಣ ಹೆಂಡಗಳ, ಬೆಲೆಬಾಳುವ ವಸ್ತುಗಳ ಆಮಿಷವನ್ನು ತೋರುವುದಿಲ್ಲ. ಆದರೆ ಬದಲಾದ ಪರಿಸ್ಥಿತಿಯಲ್ಲಿ ಚುನಾವಣೆ ಗಳು ಅಧಿಕಾರದ ಚುಕ್ಕಾಣಿ ಹಿಡಿಯುವ ಕೇಂದ್ರ ಸ್ಥಾನಗಳಾಗಿದ್ದು ಜನರ, ಪಕ್ಷಗಳ ಬೆಂಬಲದಿಂದ ಗೆದ್ದು ಬರುವ ಅಭ್ಯರ್ಥಿಗಳು ಅಧಿಕಾರ ಸಿಕ್ಕ ಕೂಡಲೇ ತಮ್ಮ ಕರ್ತವ್ಯಗಳನ್ನು ಮರೆತು ಅಧಿಕಾರ ಮದದಿಂದ ಮೆರೆಯುವುದು ಕಾಣಸಿಗುತ್ತದೆ. ಮತ ಪಡೆಯುವ ಮುನ್ನ ಬೆನ್ನು ಬಾಗಿಸಿ ಎರಡು ಕೈಗಳನ್ನು ಮುಗಿದು ಮತಯಾಚಿಸುವ ಅಭ್ಯರ್ಥಿಗಳು ಚುನಾವಣೆಯ ನಂತರ ತಾವು ಪ್ರಜಾ ಪ್ರತಿನಿಧಿಗಳು ಎಂಬುದನ್ನು ಮರೆತು ಎದೆ ಸೆಟೆಸಿ ಸರ್ವಾಧಿಕಾರಿಗಳಂತೆ ಮೆರೆಯುತ್ತಾರೆ.ಅವರ ಬಳಿ ಅಹವಾಲು ಸಲ್ಲಿಸಲು ಬರುವ ಜನರನ್ನು ನಿಕೃಷ್ಟವಾಗಿ ಕಾಣುತ್ತಾರೆ. ಅವರ ಕೆಲಸದ ವ್ಯಾಪ್ತಿ, ಕಾರ್ಯಬಾಹುಳ್ಯ ಬಹಳ ದೊಡ್ಡದು ಒಪ್ಪಿಕೊಳ್ಳೋಣ, ಆದರೆ ಸೌಜನ್ಯದಿಂದ ಕೂರಿಸಿ ಅವರ ಅಹವಾಲುಗಳನ್ನು ಸ್ವೀಕರಿಸುವ, ಸಮಾಧಾನವಾಗಿ ಮಾತನಾಡುವ ಔಚಿತ್ಯವನ್ನು ಕೂಡ ಅವರು ಮರೆತುಬಿಡುತ್ತಾರೆ.ಇದು ಖಂಡನೀಯ. ಕೆಲವೊಮ್ಮೆ ಕೆಲ ಪಕ್ಷದ ಕಾರ್ಯಕರ್ತರು ತಮ್ಮ ಹಿಂಬಾಲಕರನ್ನು ಒಗ್ಗೂಡಿಸಿಕೊಂಡು ತಮ್ಮ ಧ್ಯೇಯ ಸಾಧನೆಗಾಗಿ ಅವರನ್ನು ಪೀಡಿಸಬಹುದು ನಿಜ... ಆದರೆ ಚುನಾವಣೆಯ ಸಮಯದಲ್ಲಿ ಅವರು ಮಾಡಿರುವ ಸಹಾಯವನ್ನು ನೆನೆದು ಅಕೃತ್ಯಗಳಿಗೆ ಅವಕಾಶ ಮಾಡಿಕೊಡಬಾರದು. ಎಲ್ಲಕ್ಕೂ ಮಿಗಿಲಾಗಿ ಜನತಾ ಜನಾರ್ಧನನ ಕಲ್ಯಾಣವೇ ಅವರ ಮುಖ್ಯ ಧ್ಯೇಯವಾಗಬೇಕು.

ಸಮಾಜದ ಪ್ರತಿಯೊಬ್ಬ ನಾಗರಿಕರು ತಮ್ಮ ಮತ ಚಲಾಯಿಸುವ ಮೂಲಕ ಉತ್ತಮ ಅಭ್ಯರ್ಥಿಯನ್ನು ಆಯ್ದುಕೊಳ್ಳಲು ಎಂದೇ ಚುನಾವಣೆಯ ದಿನ ರಜೆ ಘೋಷಿಸುವುದು ಎಲ್ಲರೂ ತಮ್ಮ ಮತಗಳನ್ನು ಚಲಾಯಿಸಲು ಅನುಕೂಲವಾಗಲಿ ಎಂಬ ಉದ್ದೇಶದಿಂದಲೇ ಹೊರತು ಎರಡು ಮೂರು ದಿನಗಳ ರಜೆಗಳನ್ನು ಒಟ್ಟುಗೂಡಿಸಿಕೊಂಡು ಪಿಕ್ನಿಕ್ ಪ್ರವಾಸ ಎಂದು ಸುತ್ತಾಟಕ್ಕೆ ಹೋಗುವುದಕ್ಕಲ್ಲ.

ಚುನಾವಣೆಯಲ್ಲಿ ಉತ್ತಮ ಅಭ್ಯರ್ಥಿಗೆ ಮತ ಚಲಾಯಿಸುವುದು ನಮ್ಮ ಪರಮ ಕರ್ತವ್ಯ ಎಂಬುದನ್ನು ಅರಿತು ಮತ ಚಲಾಯಿಸುವ ಮೂಲಕ ಸಂವಿಧಾನವು ನಮಗೆ ನೀಡಿರುವ ಹಕ್ಕನ್ನು ಪುರಸ್ಕರಿಸಬೇಕು. ನನ್ನೊಬ್ಬನ ಓಟಿನಿಂದ ಏನಾಗುತ್ತದೆ ಎಂದು ಮತ ಚಲಾಯಿಸುವುದನ್ನು ಅಸಡ್ಡೆ ಮಾಡಬಾರದು. "ಎವರಿ ಓಟ್ ಕೌಂಟ್ಸ್ " ಒಂದೇ ಮತದ ಅಂತರದಿಂದ ಎಷ್ಟೋ ಬಾರಿ ಸೋಲು ಗೆಲುವುಗಳ ನಡುವೆ ತೂಗುಯ್ಯಾಲೆ ಆಡುತ್ತದೆ. ಉತ್ತಮ ಅಭ್ಯರ್ಥಿ ಕೇವಲ ಒಂದೆರಡು ಮತಗಳ ಅಂತರದಲ್ಲಿ ಸೋಲಬಹುದು ಯೋಗ್ಯವಲ್ಲದ ವ್ಯಕ್ತಿ ಚುನಾವಣೆಯಲ್ಲಿ ಗೆಲುವು ಗಳಿಸಲು ಒಂದೆರಡು ಮತಗಳ ಅಂತರವು ಸಾಕಾಗಬಹುದು. ಆದ್ದರಿಂದ ನಿಮ್ಮೆಲ್ಲ ಕೆಲಸ ಕಾರ್ಯಗಳನ್ನು ಬದಿಗಿಟ್ಟು ಯೋಗ್ಯ ಅಭ್ಯರ್ಥಿಗೆ ಮತ ನೀಡುವ ಮೂಲಕ ಭಾರತ ದೇಶದ ಪ್ರಜಾತಂತ್ರವನ್ನು ರೂಪಿಸುವಲ್ಲಿ ನಿಮ್ಮ ಕರ್ತವ್ಯವನ್ನು ನಿರ್ವಹಿಸಬೇಕು.

ಭಾರತ ಸರ್ಕಾರವು 2009 ರಿಂದ ಸ್ವೀಪ ಸಂಸ್ಥೆಯ ಸಹಯೋಗದಲ್ಲಿ ಮತದಾನ ಜಾಗೃತಿ ಶಿಬಿರಗಳನ್ನು ನಡೆಸುತ್ತಿದ್ದು ಮತದಾನ ಪ್ರಕ್ರಿಯೆಯ ಕರ್ತವ್ಯಗಳನ್ನು ಮತ್ತು ಚುನಾವಣೆಯ ಮೂಲಭೂತ ಜ್ಞಾನವನ್ನು ಜನರಿಗೆ ನೀಡುವ ಮೂಲಕ ಜನಜಾಗೃತಿಯನ್ನು ಮೂಡಿಸುತ್ತಿದ್ದಾರೆ. ಒಟ್ಟಿನಲ್ಲಿ ಅವರ ಪ್ರಾಥಮಿಕ ಗುರಿಯು ಎಲ್ಲಾ ಅರ್ಹ ನಾಗರಿಕರನ್ನು ಮತದಾನ ಮಾಡಲು ಮತ್ತು ಚುನಾವಣೆಯ ಸಮಯದಲ್ಲಿ ತಿಳುವಳಿಕೆಯುಳ್ಳ ನಿರ್ಧಾರವನ್ನು ಮಾಡಲು ಪ್ರೋತ್ಸಾಹಿಸುವ ಮೂಲಕ ಭಾರತದಲ್ಲಿ ನಿಜವಾದ ಭಾಗವಹಿಸುವಿಕೆಯ ಪ್ರಜಾಪ್ರಭುತ್ವವನ್ನು ನಿರ್ಮಿಸುವುದು. ಕಾರ್ಯಕ್ರಮವು ರಾಜ್ಯದ ಸಾಮಾಜಿಕ–ಆರ್ಥಿಕ, ಸಾಂಸ್ಕೃತಿಕ ಮತ್ತು ಜನಸಂಖ್ಯಾ ಪ್ರೊಫೈಲ್ ಮತ್ತು ಹಿಂದಿನ ಸುತ್ತಿನ ಚುನಾವಣೆಗಳಲ್ಲಿ ಚುನಾವಣಾ ಭಾಗವಹಿಸುವಿಕೆಯ ಇತಿಹಾಸ ಮತ್ತು ಅದರ ಕಲಿಕೆಯ ಪ್ರಕಾರ ವಿನ್ಯಾಸಗೊಳಿಸಲಾದ ಬಹು ಸಾಮಾನ್ಯ ಮತ್ತು ಉದ್ದೇಶಿತ ಮಧ್ಯಸ್ಥಿಕೆಗಳನ್ನು ಆಧರಿಸಿದೆ.

ಆದ್ದರಿಂದ ಭಾರತದ ಪ್ರಜ್ಞಾವಂತ ನಾಗರಿಕರೇ ನಿಮ್ಮ ಮತ ನಿಮ್ಮ ಹಕ್ಕು... ಯಾವುದೇ ಆಮಿಷಗಳಿಗೆ ಬಲಿಯಾಗದೆ ನಿಮ್ಮ ಹಕ್ಕನ್ನು ಮಾರಿಕೊಳ್ಳದೆ ಸೂಕ್ತ ಅಭ್ಯರ್ಥಿಗೆ ಮತ ನೀಡುವ ಮೂಲಕ ಪ್ರಜಾತಂತ್ರವನ್ನು ಗೆಲ್ಲಿಸಿ, ಸದೃಢ ಭಾರತವನ್ನು ಕಟ್ಟುವಲ್ಲಿ ನಿಮ್ಮ ಸಹ ಯೋಗವನ್ನು ನೀಡಿ.

# ಸಲಹೆ ನೀಡುವ ವೇಳೆ ಎಚ್ಚರ

ಇಂದಿನ ಕಾಲದಲ್ಲಿ ಯಾರಿಗಾದರು ಸಲಹೆ ನೀಡುತ್ತಿದ್ದೇವೆ ಎಂದರೆ ಒಂದಕ್ಕೆ ನೂರು ಬಾರಿ ಯೋಚಿಸಬೇಕು. ಹಾಗೆಯೆ ಯಾವುದೇ ಸಲಹೆ ನೀಡಬೇಕಾದರೆ ಕೆಲವು ವಿಷಯಗಳ ಬಗ್ಗೆ ಗಮನ ಹರಿಸಬೇಕಾಗುತ್ತದೆ. ಯಾಕೆಂದರೆ ಯಾರಿಗೆ, ಯಾವಾಗ, ಯಾಕೆ, ಎಂತಹ ಸಲಹೆ ನೀಡುತ್ತಿದ್ದೇವೆ ಎಂಬುದು ತುಂಬಾ ಮುಖ್ಯವಾಗಿರುತ್ತದೆ. ಕೆಲವೊಮ್ಮೆ ನಮ್ಮವರು ಎಂದುಕೊಂಡವರಿಗೆ ಕೊಟ್ಟ ಸಲಹೆಗಳು ಅವರಿಗೆ ಇಷ್ಟವಾಗದೆ, ಕಷ್ಟವಾಗುಬಹುದು. ಇಲ್ಲವಾದಲ್ಲಿ ನಮ್ಮ ಬಗ್ಗೆಯೇ ಬೇಸರ ಮೂಡುವಂತೆ ಮಾಡಬಹುದು. ಆದ್ದರಿಂದ ಸಲಹೆ ನೀಡುವ ಬಗ್ಗೆ ತುಂಬ ಜಾಗರೂಕರಾಗಿರುವುದು ಅವಶ್ಯ. ನಾನು ನೋಡಿದ, ಕೇಳಿದ ಸಂಗತಿಗಳನ್ನು ನಿಮ್ಮ ಮುಂದೆ ಇರಿಸುವ ಮೂಲಕ ಈ ವಿಷಯವನ್ನು ಅರ್ಥಮಾಡಿಸಲು ಪ್ರಯತ್ನ ಪಡುತ್ತೇನೆ.

ಒಮ್ಮೆ ಗಂಡ–ಹೆಂಡಿಯ ನಡುವೆ ಒಂದು ವಿಷಯದ ಬಗ್ಗೆ ಚರ್ಚೆ ನಡೆದಿತ್ತು. ಅದು ವೈಯಕ್ತಿಕ ವಿಷಯದ ಬಗ್ಗೆ. ನಾನು ಆರಂಭದಲ್ಲಿ ನೋಡಿದಾಗ ಇಬ್ಬರು ಕೂಲಂಕುಶವಾಗಿ ಚರ್ಚೆಯನ್ನು ಆರಂಭಿಸಿ ಮುಗಿಸುವ ಹಂತಕ್ಕೆ ಸಂಪೂರ್ಣವಾಗಿ ತದ್ವಿರುದ್ಧ ನಿಲುವಿಗೆ ಬಂದು ನಿಂತಿದ್ದರು. ಕೊನೆಗೆ ಏನಾಯಿತು ಎಂಬುದುನ್ನು ಕೇಳಿದಾಗ ಸಹಜವಾಗಿಯೇ ನೀಡುವ (ನನ್ನ ಮಾತಿಗೆ ಬೆಲೆನೇ ಕೋಡುವುದಿಲ್ಲ. ನೆಗ್ಲೆಕ್ಟ್ ಮಾಡ್ತಾರೆ) ಉತ್ತರ ನೀಡಿದರು. ಆದರೆ, ಅಲ್ಲಿ ಗಂಡ ಹೆಂಡತಿ ಇಬ್ಬರಿಗೂ ತಾಳ್ಮೆ ಎಂಬುದು ಇರಲೇ ಇಲ್ಲ. ಬಗೆಹರಿಸಿಕೊಳ್ಳಬಹುದಾದ ಚಿಕ್ಕ ವಿಷಯವನ್ನೆದೊಡ್ಡದಾಗಿಸಿಕೊಂಡು ಸಂಸಾರದ ನಡುವೆ ಸಮಸ್ಯೆ ತಂದು ಕೊಂಡಿದ್ದರು.ಗಂಡ ಹೆಂಡತಿಯಾದ ಕಾರಣ ಕೇಳಬೇಕಾದವರು ಕ್ಷಮೆ ಕೇಳಿ ಅದನ್ನು ಸರಿಪಡಿಸಿಕೊಂಡರು. ಅದಾದನಂತರ ಇಬ್ಬರು ಗೆಳತಿಯರ ನಡುವಿನ ಸಂಭಾಷಣೆ ಗಮನಿಸಿದೆ. ಅಲ್ಲಿಯೂ ಇದೆ ಕಥೆ. ಸೀರೆ ತೆಗೆದುಕೊಳ್ಳಲು ಹೋದ ಯುವತಿ ಯಾವ ಸೀರೆಯನ್ನು ತೆಗೆದುಕೊಳ್ಳಬೇಕು ಎಂಬುದು ಗೊತ್ತಾಗದೆ ತನ್ನೊಂದಿಗೆ ಬಂದಿದ್ದ ಅವಳ ಗೆಳತಿಯನ್ನು ಕೇಳಿದಳು. ಅವಳು ತನಗೆ ಇಷ್ಟವಾದ ಸೀರೆಯೊಂದನ್ನು ತೋರಿಸಿ ಇದು ಚೆನ್ನಾಗಿದೆ. ನಿನ್ನ ಬಣ್ಣಕ್ಕೆ ಇದು ಒಪ್ಪುತ್ತೆ ಇದನ್ನೆ ತಗೊ ಎಂದು ಹೇಳಿದಳು. ಅಲ್ಲಿಗೆ ಶುರುವಾಯಿತು. ನಾನು ಕೇಳಿದೆ ಎಂಬ ಕಾರಣಕ್ಕೆ ಕಾಟಚಾರಕ್ಕೆ ಯಾವುದೊ ಒಂದು ಹಳೆಯ, ಅಂಚು ಸರಿಯಿಲ್ಲದ, ಬಣ್ಣಹೋಗುವ, ಕ್ವಾಲಿಟಿ ಇಲ್ಲದ ಸೀರೆಯನ್ನು ತೋರಿಸಿ ಚೆನ್ನಾಗಿದೆ ಎಂದು ತೋರಿಸಿದ್ದಲ್ಲದೆ ನಾನು ಕಪ್ಪಗೆ ಇದ್ದಿನಿ ಎಂದು ಆಡಿಕೊಳ್ಳುತ್ತಾಳೆ. ಇನ್ನು ಮುಂದೆ ಸತ್ತರೂ ಆಕೆಯನ್ನು ನನ್ನೊಂದಿಗೆ ಶಾಪಿಂಗ್ ಮಾಡಲು ಕರೆಯುವುದಿಲ್ಲ ಎನ್ನುತ್ತಾ ಇನ್ನೊಬ್ಬ ಗೆಳತಿಯ ಮುಂದೆ ತನ್ನ ಅಳಲನ್ನು ತೋಡಿಕೊಂಡಳು. ಆ ವಿಷಯ ತಿಳಿದ ಮೇಲೆ ಸೀರೆ ಆರಿಸಿಕೊಟ್ಟ ಯುವತಿ ಪುನಃ ಕರೆದರು ಹೋಗುವುದಿಲ್ಲ. ಜೊತೆಗೆ ಅವಳ ಜೊತೆ ಶಾಪಿಂಗ್ ಹೋಗುವುದರ ಜೊತೆಗೆ ಯಾವ ವಿಷಯದ ಬಗ್ಗೆಯೂ ಅವಳೊಂದಿಗೆ ಮಾತನಾಡದೆ ಕಂಪ್ಲೀಟ್ ಆಗಿ ಮಾತೇ ಬಿಟ್ಟುಬಿಟ್ಟಳು. ಮತ್ತೊಬ್ಬ ವಿದ್ಯಾರ್ಥಿ ದುಶ್ಚಟಗಳಿಗೆ ಬಲಿಯಾಗಿ ತನ್ನ ಜೀವನದ ಗುರಿಯನ್ನೇ ಮರೆತು ಎಂಜಾಯ್ಮೆಂಟ್ ಬಗ್ಗೆ ಅಷ್ಟೇ ಗಮನ ಕೊಟ್ಟು ಓದುಬರಹದ ಬಗ್ಗೆ ಆಸಕ್ತಿ ಕಳೆದುಕೊಂಡು ಶುದ್ಧ ಸೋಮಾರಿಯಾಗಿ, ತನ್ನೊಂದಿಗೆ ಇದ್ದವರು ತನ್ನಂತೆಯೇ ಇರಬೇಕು ಎಂಬ ಮನಸ್ಥಿತಿ ತಳೆದಿರುತ್ತಾನೆ. ಆದರೆ, ಅವನೊಂದಿಗೆ ಇದ್ದವರು ಅವನಂತಾಗದೆ ಇರುವುದನ್ನು ಕಂಡು ಮನಸಲ್ಲಿಯೇ ಅವರ ಬಗ್ಗೆ ಕತ್ತಿಮಸಿಯುತ್ತಾ, ನಕಾರಾತ್ಮಕ ಅಂಶಗಳನ್ನು ಮಾತನಾಡ ತೊಡಗುತ್ತಾನೆ. ಅದನ್ನು ಗಮನಿಸಿದ ಅವನ ಗುರುಗಳು ಕರೆದು ತಿಳಿಹೇಳುತ್ತಾರೆ. ಅವನ ಇರುವಿಕೆ ಅವನೊಟ್ಟಿಗೆ ಇರುವವರ ಇರುವಿಕೆ ಬಗ್ಗೆ ಹೇಳುತ್ತಾ, ಅವರಿಬ್ಬರ ನಡುವಿನ ವ್ಯತ್ಯಾಸವನ್ನು ಎತ್ತಿತೋರಿಸುತ್ತಾರೆ. ಕಾರಣ ಆ ವಿದ್ಯಾರ್ಥಿ ಅವನೊಂದಿಗೆ ಇರುವವರನ್ನು ನೋಡಿ ಬದಲಾಗಲಿ, ಅವನಿಗೆ ಒಳ್ಳೆಯದಾಗಲಿ ಎಂದು. ಆದರೆ, ಆ ವಿದ್ಯಾರ್ಥಿ ಅದನ್ನು ಅರ್ಥಮಾಡಿಕೊಳ್ಳದೇ ಆ ಗುರುವಿನದು ಮಲತಾಯಿಧೋರಣೆ ಎಂದು ಹೇಳಿ ಸುದ್ದಿ ಮಾಡಿ, ಗುರುವಿನ ಬಗೆಗೆ ಬಳಸಬಾರದ ಪದಗಳನ್ನೆಲ್ಲಾ ಬಳಸಿದ. ಆ ವಿಷಯ ತಿಳಿದಮೇಲೆ ಆ ಗುರುವು ಬೇಸರಗೊಳ್ಳುತ್ತಾರೆ. ಆದರೂ ಆ ವಿದ್ಯಾರ್ಥಿಗೆ ಕನಸಲ್ಲಿಯೂ ಕೆಟ್ಟದ್ದನ್ನು ಬಯಸದೆ ಒಳ್ಳೆಯದನ್ನೇ ಮಾಡುತ್ತಾರೆ. ಅದು ಅವನ ಗುರುತಿಸುವಿಕೆಯನ್ನು ಬದಲಿಸಿ ಸಮಾಜದಲ್ಲಿ ಗೌರವ ದೊರೆಯುವಂತೆ......



ಲೋಹಿತೇಶ್ವರಿ ಎಸ್ ಪಿ
ಚಳ್ಳಕೆರೆ ಚಿತ್ರದುರ್ಗ

Scan For Digital Colourful
HAMPI TIMES E-paper




ಇಲ್ಲಿ ಗಂಡ–ಹೆಂಡತಿ, ಗೆಳತಿಯರು ಹಾಗೂ ಗುರು–ಶಿಷ್ಯರ ನಡುವೆ ನಡೆದಿರುವ ಕೆಲವು ನೈಜ ಸಂಗತಿಗಳನ್ನೆ ಕೊಂಚ ಬದಲಾವಣೆ ಮಾಡಿ ಹೇಳಲಾಗಿದೆ. ಕಾರಣ ಇಂತಹ ಸಂಗತಿಗಳು ಪ್ರತಿಯೊಬ್ಬರ ಜೀವನದಲ್ಲೂ ಎದುರಾಗಿರುತ್ತವೆ. ನಾವು ಬೇಡ ಎಂದುಕೊಂಡವರ ಬಾಳಲ್ಲಿ ನಮ್ಮ ಅಗತ್ಯ ಏರ್ಪಡುವ, ಅವರಿಗೆ ಸಹಾಯ ಮಾಡುವ, ಸಲಹೆ ನೀಡುವ ಸಂದರ್ಭಗಳು ಎದುರಾಗಿ ಅದು ನಕಾರಾತ್ಮಕ ಪರಿಣಾಮ ಬೀರಿರಲೂ ಬಹುದು. ಆದರೆ, ಇಲ್ಲಿ ಹೇಳಿರುವ ಮೂರು ಘಟನೆಗಳಲ್ಲಿ ಸಲಹೆ ಎಂಬುದು ಸಹಜವಾಗಿದೆ. ಆದರೆ ಯಾರಿಗೆ ಸಲಹೆ ನೀಡಿದರೆ ಅದು ಯಾವ ಪರಿಣಾಮ ಬೀರುತ್ತದೆ ಎಂಬುದು ಮುಖ್ಯ ಸಲಹೆ ನೀಡುವ ಮುನ್ನ ಎದುರಿರುವ ವ್ಯಕ್ತಿ ಹಾಗೂ ನಮ್ಮ ನಡುವೆ ಯಾವ ಬಾಂಧವ್ಯವಿದೆ ಎಂಬುದನ್ನು ಗಮನದಲ್ಲಿ ಇಟ್ಟುಕೊಂಡು ಕೊಡಬೇಕು. ಇಲ್ಲವಾದಲ್ಲಿ ಒಂದು ಸಲಹೆ ಆ ಸಂಬಂಧವನ್ನೇ ಕೊನೆಗೊಳಿಸಬಹುದಾದ ಸಂದರ್ಭಗಳು ಎದುರಾಗುತ್ತವೆ.

ಹಂಪಿ ಟೈಮ್ಸ್
HAMPI TIMES

ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
ಡಿ..ವಿ.ಜಿ.


## ನಿತ್ಯ ಪಂಚಾಂಗ

ಮಾಸ: ಚೈತ್ರ । ಸಂವತ್ಸರ: ಕ್ರೋಧಿ

**19–04–2024 – ಶುಕ್ರವಾರ**

| | |
|---|---|
| ತಿಥಿ | : ಏಕಾದಶಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ಮಾಘಾ |
| ಯೋಗ | : ವೃದ್ಧೊ |
| ಕರಣ | : ವಾಣಿಜ |
| ಸೂರ್ಯೋದಯ | : 06:03:54 |
| ಸೂರ್ಯಾಸ್ತ | : 18:48:18 |
| ರಾಹು | : 10:51–12:26 |
| ಯಮಘಂಡ | : 15:37–17:13 |
| ಗುಳಿಕ | : 07:39–09:15 |

## ತುಂಗಭದ್ರಾ ನೀರಿನ ಮಟ್ಟ



ಗುರುವಾರ : 18–04–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1578.74 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 112 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 3.890 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1576.85 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 248 ಕ್ಯುಸೆಕ್ |
| ಸಾಮರ್ಥ್ಯ | 3.128 ಟಿಎಂಸಿ |

# ಗ್ರಾಮೀಣ ಸೂಕ್ಷ್ಮ ಮತಗಟ್ಟೆಗಳಿಗೆ ಡಿಸಿ ಭೇಟಿ ಸಾರ್ವಜನಿಕರಿಗೆ ಮತದಾನ ಜಾಗೃತಿ

**ಹಂಪಿ ಟೈಮ್ಸ್ ಹೊಸಪೇಟೆ**

ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಅವರು ಗುರುವಾರ ಗ್ರಾಮೀಣ ಭಾಗದಲ್ಲಿ ಪ್ರವಾಸ ಕೈಗೊಂಡು ಮತದಾನದ ಕುರಿತು ಗ್ರಾಮಸ್ಥರಲ್ಲಿ ಜಾಗೃತಿ ಮೂಡಿಸಿದರು.

ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಜಿಲ್ಲೆಯ ವಿವಿಧೆಡೆ ಗುರುತಿಸಿರುವ ಸೂಕ್ಷ್ಮ ಮತಗಟ್ಟೆಗಳಿಗೆ ಭೇಟಿ ನೀಡಿ ಅಲ್ಲಿನ ಸ್ಥಿತಿಗತಿಯ ಬಗ್ಗೆ ಮಾಹಿತಿ ಪಡೆದರು.

ಮೊದಲಿಗೆ ಚಿಕ್ಕಜೋಗಿಹಳ್ಳಿ ತಾಂಡಾಕ್ಕೆ ಬಳಿಕ ಕೂಡ್ಲಿಗಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಕೊಟ್ಟೂರ ತಾಲೂಕಿನ ಕಾಳಾಪುರ ಗ್ರಾಮಕ್ಕೆ ಭೇಟಿ ನೀಡಿದರು. ಗ್ರಾಮಸ್ಥರನ್ನುದ್ದೇಶಿಸಿ ಮಾತನಾಡಿದ ಜಿಲ್ಲಾಧಿಕಾರಿಗಳು, ಲೋಕಸಭಾ



ಚುನಾವಣೆಯ ಮತದಾನವು ಮೇ 7ರಂದು ನಡೆಯಲಿದೆ. ಅಂದು ಅರ್ಹರೆಲ್ಲರೂ ತಪ್ಪದೇ ಮತದಾನ ಮಾಡಬೇಕು. ಮತದಾನ ಮಾಡುವ ವಿಚಾರದಲ್ಲಿ ಯಾರು ಕೂಡ ಹೆದರಬಾರದು. ಶಾಂತಿಯುತ ಮತದಾನಕ್ಕೆ ವಿಜಯನಗರ ಜಿಲ್ಲಾಡಳಿತವು ಎಲ್ಲ ರೀತಿಯ ಅಗತ್ಯ ಸಿದ್ಧತೆ ಮಾಡಿದೆ. ಜನರು ನಿರ್ಭಯದಿಂದ ಮತದಾನ ಮಾಡಬೇಕು. ಸಾರ್ವಜನಿಕರೊಂದಿಗೆ ಜಿಲ್ಲಾಡಳಿತವು ಸದಾಕಾಲ ಇರಲಿದೆ ಎಂದು ಜಿಲ್ಲಾಧಿಕಾರಿಗಳು ಗ್ರಾಮಸ್ಥರಿಗೆ ತಿಳಿಸಿ ಅವರಲ್ಲಿ ವಿಶ್ವಾಸ ಮೂಡಿಸಿದರು.

ಈ ಸಂದರ್ಭದಲ್ಲಿ ಸಹಾಯಕ ಚುನಾವಣಾಧಿಕಾರಿ ಡಾ.ಹೆಚ್.ಎನ್. ರಘು., ಕೂಡ್ಲಿಗಿ ಡಿವೈಎಸ್ಪಿ., ಕೊಟ್ಟೂರ ತಹಸೀಲ್ದಾರ ಅಮರೇಶ ಜಿ.ಕೆ., ಕೊಟ್ಟೂರ ಪಿಎಸ್ಐ ಗೀತಾಂಜಲಿ, ಹೊಸಳ್ಳಿ ಪಿಎಸ್ಐ ಈರಪ್ಪ ಅಂಗಡಿ ಸೇರಿದಂತೆ ಇನ್ನಿತರರು ಇದ್ದರು.

# ವಾಂತಿಭೇದಿ ಜನತೆ ವಿಚಲಿತ

ಮೊದಲ ಪುಟದಿಂದ

ಅಲ್ಲದೆ ಗ್ರಾಮಕ್ಕೆ ಸರಬರಾಜು ಆಗುವ ಕುಡಿಯುವ ನೀರಿನ ಪೈಪ್ ಲೈನ್ ಅಲ್ಲಲ್ಲಿ ಸೋರಿಕೆ ಯಾಗುತ್ತಿದ್ದನ್ನು ಗಮನಿಸಿ ಸರಿಪಡಿಸಲು ಸೂಚನೆ ನೀಡಿದ್ದೇನೆ ಎಂದ ಅವರು, ಜನರಿಗೆ ಈಗ ಸದ್ಯ ಬಳಸಲು ಖಾಸಗಿ ಕೊಳವೆ ಬಾವಿಯಿಂದ ನೀರನ್ನು ಪೂರೈಸಲು ತಿಳಿಸಿದ್ದು, ಆ ನೀರನ್ನು ಸಹ ಸಂಗ್ರಹಿಸಿ ಪರೀಕ್ಷೆಗೆ ಕಳುಹಿಸಿದ್ದು, ವರದಿ ಬಂದ ನಂತರ ಪೂರೈಕೆ ಮಾಡಲು ಗ್ರಾಪಂ ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ ಎಂದರು. ಈಗಗಾಲೇ ಪರಿಸ್ಥಿತಿ ಹತೋಟಿಯಲ್ಲಿದ್ದು ಗುರುವಾರ ಯಾವುದೇ ಪ್ರಕರಣ ಕಂಡು ಬಂದಿಲ್ಲ ಈಗಾಗಲೇ ಟಿಎಚ್ಓ ಶಂಕರ್ ನಾಯ್ಕ್ ಅವರು ಸಹ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಜನರು ಯಾವುದೇ ಆತಂಕ ಪಡುವ ಅವಶ್ಯ ಇಲ್ಲ ತಾತ್ಕಾಲಿಕ ಆರೋಗ್ಯ ಶಿಬಿರ ಗ್ರಾಮದಲ್ಲಿ ಇದ್ದು, ಚಿಕಿತ್ಸೆ ನೀಡುತ್ತಿದ್ದಾರೆ ಎಂದು ತಿಳಿಸಿದರು. ಆರೋಗ್ಯ ಸಿಬ್ಬಂದಿಗಳಾದ ಮಹೇಶ್, ಅಂಜಲಿ, ಶೈಲಾಕ್ಷಿ, ಆಶಾ ಕಾರ್ಯಕರ್ತೆ ಹನುಮವ್ವ, ಅಂಗನವಾಡಿ ಕಾರ್ಯಕರ್ತೆ ಮೂಗಮ್ಮ, ಇದ್ದರು.

# ವಿಜಯನಗರ ಜಿಲ್ಲೆಯಲ್ಲಿ ಆಲಿಕಲ್ ಮಳೆ

**ಹಂಪಿ ಟೈಮ್ಸ್ ಹೊಸಪೇಟೆ:**

ತಾಲೂಕಿನ ಕಾಕುಬಾಳು ಗ್ರಾಮದಲ್ಲಿ ಗಂಟೆಗೂ ಅಧಿಕ ಸುರಿದ ಭಾರಿ ಮಳೆಯಲ್ಲಿ ಆಲಿಕಲ್ ಬಿದ್ದವು. ನಿರಂತರವಾಗಿ ಮಳೆ ಸುರಿದಿದ್ದರಿಂದ ರಸ್ತೆಗಳೇ ಕಾಲುವೆಯಾದವು. ಮಳೆ ಜೊತೆ ಗಾಳಿ ಬೀಸಿದ್ದರಿಂದ ಅಲ್ಲಲ್ಲಿ ವಿದ್ಯುತ್ ಕಂಬಗಳು ನೆಲಕ್ಕೆ ಬಾಗಿದ್ದವು. ಹರಪನಹಳ್ಳಿ ತಾಲೂಕಿನ ಮಾಡ್ಲಗೇರಿ ಗ್ರಾಮದಲ್ಲಿ ಮಳೆಗೆ ಮನೆಯ ಛಾವಣಿ ಕುಸಿದಿದೆ. ಕೆಲವೆಡೆ ಮರಗಳು ಉರುಳಿವೆ. ವಿಜಯನಗರ ಜಿಲ್ಲೆಯಲ್ಲಿ ಯುಗಾದಿ ನಂತರ ಮೊದಲ ದೊಡ್ಡ ಮಳೆಯಾಗಿದೆ. ಬಿಸಿಲಿನ ತಾಪಕ್ಕ ತತ್ತರಿಸಿದ್ದ ಜನತೆ ನಿಟ್ಟುಸಿರು ಬಿಡುವಂತಾಗಿದೆ. ಆದರೆ ಕೆಲವಡೆ ಮಳೆಗೆ ಹಸುಗಳು ಸಾವಿಗೀಡಾಗಿದ್ದು, ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ.







# ಸಿಡಿಲಿಗೆ 3 ಹಸು ಸಾವು

**ಹಂಪಿ ಟೈಮ್ಸ್ ಕೊಟ್ಟೂರು**

ತಾಲೂಕಿನಲ್ಲಿ ಗುರುವಾರ ಮಧ್ಯಾಹ್ನ ಸುರಿದ ಮಳೆಯ ಆರ್ಭಟಕ್ಕೆ ಉಂಟಾದ ಗುಡುಗು ಸಿಡಿಲಿಗೆ ತಾಲೂಕಿನ ಹಾರಾಳ ಗ್ರಾಮದ ಅಂಬಳಿ ಪ್ರಕಾಶ್ ಎಂಬುವವರಿಗೆ ಸೇರಿದ ಜರ್ಸಿ ತಳಿಯ 3 ಆಕಳು ಸಿಡಿಲಿಗೆ ಬಲಿಯಾಗಿವೆ. ಹಸುಗಳನ್ನೆ ಅವಲಂಬಿಸಿ ಜೀವನ ನಡೆಸುತ್ತಿದ್ದ ರೈತ ಕಣ್ಣೀರಿಟ್ಟಿದ್ದಾನೆ. ಸಂಬಂಧಿಸಿದವರು ಕೂಡಲೇ ಪರಿಹಾರ ನೀಡಬೇಕು ಎಂದು ಸ್ಥಳೀಯರು ಒತ್ತಾಯಿಸಿದ್ದಾರೆ.






Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA